
# ನಾದನೂಪುರ ವಂಡಾರು

# Nadanoopura Vandaru



ಮುಖ್ಯಸ್ಥರು – ವಂಡಾರು ಗೋವಿಂದ
97418 47278
ಪ್ರಧಾನ ಸಂಪಾದಕರು – ಶುಭಾಶಯ
ಗೌರವ ಸಂಪಾದಕರು – ಅಜಿತ್ ಕಾರಂತ್
94496 86807

**Nadanoopura Yakshothana Trust (NYT) (R.)**
**Vandaru, Marvi, Vandaru village and Post,**
**Brahmavara Taluk, Udupi District – 576223**
**Email : nadanoopuravandaru@gmail.com**
**Website – https://nyt.1ngo.in/**

ಪರಿವಿಡಿ
ಬೋರ್ಡ್ ರೂಮ್
ಸಂಪಾದಕೀಯ
ಜೀ ಚಾನೆಲ್ ಮೇಲಿನ ಮುನಿಸಿನ ಸುತ್ತ..!!
ಯಕ್ಷಗಾನ ಕಲಾವಿದರಿಗೆ ಬಿರುದುಗಳು ಎಷ್ಟು ಅವಶ್ಯ?
ಯಕ್ಷಗಾನ ಪ್ರಸಂಗ ಪ್ರಯೋಗ ಲೆಕ್ಕಾಚಾರ
ನಡುತಿಟ್ಟಿನ ಅಪ್ರತಿಮ ಪುರುಷ ವೇಷಧಾರಿ– ಮಜ್ಜಿಗೆಬೈಲು ಆನಂದ ಶೆಟ್ಟಿ
ಧೀರ ಕಲೆಯೊಳಗೆ ಕೀರವಾಣಿಯರು – ರತ್ನಾವತಿ ಶಿರಂತಡ್ಕ
ಪೂರ್ವರಂಗವೇ ನಿಜವಾದ ಬೆಳಕಿನ ಸೇವೆ
ಕಾಡುವ ಪಾತ್ರ – 1. ಚಂದ್ರ ಕುಮಾರ್ ನೀರ್ಜೆಡು
2. ಜನಾರ್ಧನ ಮಂಡಗಾರು
ಯಕ್ಷ ಸಂಪನ್ಮೂಲ – ಮೊಗವೀರ ವ್ಯವಸ್ಥಾಪನಾ ಮಂಡಳಿ ಮುಂಬೈ
ನಮ್ಮ ಲೈಬ್ರರಿ – ಯಕ್ಷಗಾನ ಪ್ರಸಂಗಗಳಲ್ಲಿ ಕರ್ಣ
ಚಾರಿಟಿ ರೂಮ್

## ಬೋರ್ಡ್ ರೂಂ



**ಗೋವಿಂದ ವಂಡಾರು**

**ಆತ್ಮೀಯರೇ,**

ಇದೀಗ ನನ್ನ ಯಕ್ಷ ಬದುಕಿನ 19 ವರ್ಷಗಳನ್ನು ಪೂರೈಸಿ, ಇಪ್ಪತ್ತನೇ ವರುಷದ ತಿರುಗಾಟದ ಹುಮ್ಮಸ್ಸಿನಲ್ಲಿದ್ದೇನೆ. ಶ್ರೀ ಕಿಶನ್ ಹೆಗ್ಡೆಯವರು ಆಶ್ರಯ ಕೊಟ್ಟ ಶ್ರೀ ಸಾಲಿಗ್ರಾಮ ಮೇಳದ ಅನುಭವಗಳ ಸ್ಮರಣೆಯೊಂದಿಗೆ, ಶ್ರೀ ಕ್ಷೇತ್ರ ಮಂದಾರ್ತಿ ಮೇಳದಲ್ಲಿ ನನ್ನ ಯಕ್ಷ ಸೇವೆ ಮುಂದುವರೆಯಲಿದೆ. ಇದು ಬದುಕಿನ ದೊಡ್ಡ ಸಾಧನೆ ಎಂದು ಹೇಳಿಕೊಳ್ಳುವುದೇನಲ್ಲ. ಆದರೆ ಅಭಿಮಾನಿಗಳ ಮೂಟೆ ಮೂಟೆ ಪ್ರೀತಿ ಅಭಿಮಾನ ನನ್ನನ್ನು ಇಷ್ಟು ಎತ್ತರಕ್ಕೆ ಬೆಳೆಸಿದೆ. ಯಾಕೀ ಮಾತು ಎಂದರೆ ಮುಂದಿಗೂ ನನ್ನನ್ನು ಬೆಳೆಸಬೇಕಾದವರು ಯಕ್ಷಾಭಿಮಾನಿಗಳಾದ ನೀವೇ. ಬದುಕಿನ ಕೊಂಚ ಭಾಗವನ್ನು

ಕಲಾಸೇವೆಗೆ ಮರಳಿ ಕೊಡುವ ಅಪೇಕ್ಷೆಯಿಂದ ಪ್ರಾರಂಭವಾದ ನಾದ ನೂಪುರ ಟ್ರಸ್ಟ್ ಪುಟ್ಟ ಪುಟ್ಟ ಹೆಜ್ಜೆಗಳನ್ನಿಡುತ್ತಾ ನಾಲ್ಕೈದು ಚಟುವಟಿಕೆಗಳನ್ನು ಬೆನ್ನೇರಿಸಿಕೊಂಡು ತನ್ನ ಪಯಣ ಮುಂದುವರಿಸಿದೆ. ಅನುಭವಿ ಬರಹಗಾರರ ಪತ್ರಿಕಾ ತಂಡ ನಾದನೂಪುರ ಪತ್ರಿಕೆಯನ್ನು ಬೆಳೆಸುತ್ತಿದ್ದರೆ, ಸ್ನೇಹಿತ ಕಲಾವಿದರ ಬಳಗ ಉತ್ತಮ ಕಾರ್ಯಕ್ರಮಗಳನ್ನು ನೀಡುತ್ತಿದ್ದೇವೆ. ಇದರಾಚೆಗೆ ಇನ್ನಷ್ಟು ಯೋಜನೆಗಳು ಜೀವ ತಳೆಯುತ್ತಿವೆ. ಈ ಎಲ್ಲ ಪ್ರಯತ್ನಗಳ ನಡುವೆ 20 ವಸಂತಗಳನ್ನು ಕಂಡ ಯಕ್ಷಬದುಕಿನ ಈ ಸಂಭ್ರಮವನ್ನು ಮುಂಬೈನ ಅಂಧೇರಿಯಲ್ಲಿ ಆಚರಿಸಿಕೊಳ್ಳಲಿದ್ದೇನೆ. ಅಂಧೇರಿಯಲ್ಲಿ ನೆಲೆಸಿರುವಂತಹಾ, ಯಕ್ಷಪ್ರೇಮಿಗಳು, ನನ್ನ ಸಮುದಾಯದವರು, ಅಲ್ಲಿ ಬೃಹತ್ ಮಟ್ಟದಲ್ಲಿ ಸಮಾಜಸೇವೆಯಲ್ಲಿ ತೊಡಗಿಸಿಕೊಂಡಿರುವ ಸಂಸ್ಥೆಯೊಂದು ನನ್ನ ಕಲಾಸೇವೆಯನ್ನು ಗುರುತಿಸಿ ಈ ಸನ್ಮಾನಕ್ಕೆ ನನ್ನನ್ನು ಭಾಜನನನ್ನಾಗಿಸಿದ್ದಾರೆ. ಅವರ ಪ್ರೀತಿಗೆ ಅಭಿಮಾನಕ್ಕೆ ನಾನು ಅಭಾರಿ. ಶ್ರೀ ಅಶೋಕ್ ಸುವರ್ಣರವರ ಮುತುವರ್ಜಿಯಿಂದ ಮೊಗವೀರ ವ್ಯವಸ್ಥಾಪಕ ಮಂಡಳಿಯವರು ನನ್ನ ಕಲಾಸೇವೆಯನ್ನು ಗುರುತಿನಿದೆ ಆಗಸ್ಟ್ ಏಳರಂದು ನನ್ನನ್ನು ಗೌರವಿಸಲಿದ್ದಾರೆ. ನನ್ನ ಕಲಾಸೇವೆಯನ್ನು ಗುರುತಿಸಿ ಸನ್ಮಾನಿಸಲಿರುವ ಈ ಸಂಘಟನೆಯ ಬಗ್ಗೆ ನಾನಿಲ್ಲಿ ಹೇಳಲೇ ಬೇಕಿದೆ. ಮುಂಬೈ ಮಹಾನಗರದಲ್ಲಿ ಕೇಂದ್ರ ಕಛೇರಿಯನ್ನು ಹೊಂದಿರುವ ಮೊಗವೀರ ವ್ಯವಸ್ಥಾಪಕ ಮಂಡಳಿಗೆ 120 ವರ್ಷಗಳ ಸುದೀರ್ಘ ಇತಿಹಾಸವಿದೆ. ಆಗಸ್ಟ್ 09 1902 ರಲ್ಲಿ ಪ್ರಾರಂಭವಾದ ಸಂಸ್ಥೆಯು ಶೈಕ್ಷಣಿಕ, ಆರೋಗ್ಯ, ಸಾಮಾಜಿಕ ಕಲ್ಯಾಣ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅಪಾರವಾದ ಸೇವೆ ಸಲ್ಲಿಸುತ್ತಾ ಬಂದಿದೆ. (ಸಂಸ್ಥೆಯ ಕುರಿತ ಹೆಚ್ಚಿನ ಮಾಹಿತಿ ಯಕ್ಷ ಸಂಪನ್ಮೂಲ ಅಂಕಣದಲ್ಲಿ ನೀಡಲಾಗಿದೆ). ಸಾಂಸ್ಕೃತಿಕವಾಗಿ, ಅದರಲ್ಲೂ ಯಕ್ಷಗಾನ ಕ್ಷೇತ್ರಕ್ಕೆ ಈ ಸಂಘಟನೆ ನೀಡಿರುವ ಕೊಡುಗೆ ಅನನ್ಯ. ಇದುವರೆಗೂ ಸುಮಾರು ಐವತ್ತಕ್ಕೂ ಮಿಕ್ಕಿ ಅರ್ಹ ಕಲಾವಿದರನ್ನು ಗುರುತಿಸಿ ಈ ಮಂಡಳಿಯ ಮೂಲಕ ಸನ್ಮಾನಿಸಲಾಗಿದೆ. ಯಕ್ಷಗಾನ ಕಾರ್ಯಕ್ರಮಗಳನ್ನು ಆಯೋಜಿಸುವುದು, ಕಲಾವಿದರ ಸಂಕಷ್ಟಕ್ಕೆ ಸ್ಪಂದಿಸಿ ನೆರವು ನೀಡುವುದು, ಕಲಾವಿದರನ್ನು ಗುರುತಿಸಿ ಸನ್ಮಾನಿಸುವುದು ಪ್ರೋತ್ಸಾಹ ಧನ ನೀಡುವುದು, ಮೊದಲಾದ ಕಾರ್ಯಗಳಿಂದ ಅತೀ ಹೆಚ್ಚು ಜನಪ್ರಿಯವಾಗಿರುವ ಸಂಘಟನೆಯಿದು. ಈ ಸಂಸ್ಥೆಯ ಇನ್ನೊಂದು ಹಿರಿಮೆಯೆಂದರೆ ಇದು 2012ರಲ್ಲಿ ಕರ್ನಾಟಕ ರಾಜ್ಯ ಪ್ರಶಸ್ತಿಯನ್ನು ಸಮಾಜ ಸೇವಾ ವಿಭಾಗದಲ್ಲಿ ಪಡೆದುಕೊಂಡಿರುವುದು. ಅದೇ ಹಿನ್ನಲೆಯಲ್ಲಿ ಈ ವರ್ಷ ಮಂಡಳಿಯ ಸನ್ಮಾನಕ್ಕೆ ನಾನು ಪಾತ್ರನಾಗಿರುವುದು ನನಗೆ ಹೆಮ್ಮೆಯ ಸಂಗತಿ. ಇದೇ ಸಂದರ್ಭ, ಮೊಗವೀರ ವ್ಯವಸ್ಥಾಪಕ ಮಂಡಳಿ ಇದರ ಸಾಂಸ್ಕೃತಿಕ ಆಶ್ರಯದಲ್ಲಿ ಅಮೃತೇಶ್ವರಿ ಪ್ರವಾಸಿ ಮೇಳ ಕೋಟ ಹಾಗು ನಾದ ನೂಪುರ ಯಕ್ಷೋತ್ಥಾನ ಟ್ರಸ್ಟ್ ಜಂಟಿಯಾಗಿ ಶ್ವೇತ ಕುಮಾರ ಚರಿತೆ ಎಂಬ ಕಥಾನಕವನ್ನು ದಿನಾಂಕ 07-08-2022 ರಂದು ಅಂಧೇರಿಯ ಶಾಲಿನಿ ಜಿ ಶಂಕರ ಕನ್ವೆನ್ಷನಲ್ ಹಾಲ್ ನಲ್ಲಿ ಸಂಜೆ ನಾಲ್ಕು ಗಂಟೆಗೆ ಪ್ರದರ್ಶಿಸಲಿದೆ. ಕರಾವಳಿಯಾಚೆ ದಾಪುಗಾಲಿಟ್ಟಿರುವ ನಾದನೂಪುರ ಯಕ್ಷೋತ್ಥಾನ ಟ್ರಸ್ಟ್‌ನ ಚೊಚ್ಚಲ ಕಾರ್ಯಕ್ರಮ ಇದಾಗಿದೆ. ನಾದನೂಪುರ ಟ್ರಸ್ಟ್‌ನ ಇನ್ನಷ್ಟು ದಾಖಲಾರ್ಹ ಕಾರ್ಯಗಳಿಗೆ ನೀವು ಸಾಕ್ಷಿಯಾಗಲಿದ್ದೀರಿ. ನಿಮ್ಮ ಸಲಹೆ ಸೂಚನೆಗಳಿಗೆ ಸದಾ ಸ್ವಾಗತ.

ಮತ್ತೆ ಸಿಗೋಣ, ನಿಮ್ಮವನೆ
**ಗೋವಿಂದ ವಂಡಾರು**

***ನಿಮಗಿದು ಗೊತ್ತೇ?*** – ದಾಸರ ಪದ್ಯ ಮತ್ತು ಗಮಕ ಹಾಡುವುದರ ಮೂಲಕ ಭಾಗವತರಾಗಿ ಪ್ರಸಿದ್ಧರಾದವರು ರಾಜ್ಯ ಪ್ರಶಸ್ತಿ ಪುರಸ್ಕೃತ ***ಮರವಂತೆ ದಿ. ನರಸಿಂಹ ದಾಸರು*** ಮತ್ತು ***ಶ್ರೀನಿವಾಸ ದಾಸರು.*** ಇವರು ಯಕ್ಷಗಾನದಲ್ಲಿ ದಾಸರ ಶೈಲಿ ಎಂಬ ಭಾಗವತಿಕೆಯ ಹೊಸ ಶೈಲಿಯನ್ನು ಹುಟ್ಟು ಹಾಕಿದವರು. ಪ್ರಸ್ತುತ ಕಾಲದಲ್ಲಿ ದಾಸರ ಶೈಲಿಯಲ್ಲಿ ಹಾಡುವ ಭಾಗವತರು ಕಂಡು ಬರುವುದಿಲ್ಲ. ಇವರು ನಿಟ್ಟೂರು ಮೇಳ, ಮೇಗರವಳ್ಳಿ, ಮಾರಣಕಟ್ಟೆ, ಇಡಗುಂಜಿ, ಅಮೃತೇಶ್ವರಿ, ಪೆರ್ಡೂರು, ಕೊಲ್ಲೂರು ಮೇಳಗಳಲ್ಲಿ ಭಾಗವತರಾಗಿ ಸೇವೆ ಸಲ್ಲಿಸಿದ್ದರು

## ಸಂಪಾದಕೀಯ



**ಅಜಿತ್ ಕಾರಂತ್**
**ಗೌರವ ಸಂಪಾದಕರು**

**ಆತ್ಮೀಯ ಓದುಗರೆ,**

ಪ್ರಸಂಗ ರಚನೆ ಇದೊಂದು ಅದ್ಭುತ ಪ್ರತಿಭೆ. ಮೂಲಕಥೆಯನ್ನು ರಂಗಕ್ಕೆ ಬೇಕಾದ ಹಾಗೆ ವಿನ್ಯಾಸಗೊಳಿಸಿ ಕಥನ ಕಾವ್ಯವಾಗಿಸುವ ಈ ಸಾಮರ್ಥ್ಯ ಶ್ಲಾಘನೀಯ. ಇಂತಹಾ ಅನೇಕ ಪ್ರಸಂಗಕವಿಗಳು ನಮ್ಮ ಯಕ್ಷಗಾನ ಸಾಹಿತ್ಯವನ್ನು ಶ್ರೀಮಂತಗೊಳಿಸಿರುವುದನ್ನು ಇಲ್ಲಿ ಸ್ಮರಿಸುತ್ತಾ, ಕಳೆದ ಸಂಚಿಕೆಯಲ್ಲಿ ಕವಿ ಪ್ರಸಂಗಕ್ಕಿಟ್ಟಿರುವ ಶೀರ್ಷಿಕೆಯ ಬದಲಾವಣೆಯ ಬಗ್ಗೆ ಸಾಕಷ್ಟು ವಿಷಯಗಳನ್ನು ನಮ್ಮ ಪತ್ರಿಕೆ ಪ್ರಕಟಿಸಿತ್ತು. ಓದುಗರು ತಮ್ಮ ತಮ್ಮ ಅಭಿಪ್ರಾಯಗಳನ್ನು ಅನೇಕ ಜಾಲತಾಣಗಳಲ್ಲಿ ಹಂಚಿಕೊಂಡು ನೀವು ನಮ್ಮೊಂದಿಗಿದ್ದೀರಿ ಎಂಬುದನ್ನು ತೋರಿಸಿದ್ದೀರಿ. ಇದಕ್ಕಾಗಿ ನಮ್ಮ ಪತ್ರಿಕಾ ತಂಡ ನಿಮಗೆ ಆಭಾರಿಯಾಗಿದೆ.

ರಂಗಸ್ಥಳದಲ್ಲಿ ಆಟ ನೋಡಿ, ತಾಳಮದ್ದಲೆಯ ಕೂಟವನ್ನು ಕೇಳಿ ಒಂದು ಪ್ರಸಂಗವನ್ನು ನಾವು ನಮ್ಮ ಮತಿಯ ಮಿತಿಯೊಳಗೆ ವಿಮರ್ಶಿಸುತ್ತೇವೆ. ಆದರೆ ನಿಜವಾಗಿ ಕವಿಯ ಆಶಯದತ್ತ ನಮ್ಮ ಚಿತ್ತವೇ ಇರುವುದಿಲ್ಲ. ಹಾಗಾಗಿ, ಇತ್ತೀಚಿನ ಪ್ರಸಂಗಗಳಲ್ಲಿ ಏಕತಾನತೆ ಕಾಣಿಸುತ್ತಿದೆ. ಪೀಠಿಕೆಗೆ ಒಂದು ರಾಜವೇಷ, ಅದರ ಬೆನ್ನಿಗೇ ಹಾಸ್ಯಪ್ರವೇಶ. ಒಂದಕ್ಕಿಂತ ಹೆಚ್ಚು ಪ್ರಣಯ ಪ್ರಕರಣಗಳು, ಮೂರಾದರೂ ವನವಿಹಾರ.... ಹೀಗೇ ಪ್ರಸಂಗಗಳ ದೃಶ್ಯಾವಳೀ ಸಾಗುತ್ತದೆ. ಪ್ರಸಂಗದ ಪ್ರಾರಂಭಕ್ಕೇ ಪ್ರವೇಶವಾದ ಹಾಸ್ಯಪಾತ್ರ ಬೆಳಗಿನ ತನಕವೂ ಇದ್ದು, ಕೆಲವು ಗಂಭೀರ ಸನ್ನಿವೇಶಗಳನ್ನೂ, ಭಾವನಾತ್ಮಕ ಸಂದರ್ಭಗಳನ್ನೂ ಕೆಡಿಸುವ ದೃಶ್ಯ ಸಾಮಾನ್ಯವಾಗಿದೆ. ಇದು ಕಾಲ್ಪನಿಕ ಪ್ರಸಂಗಗಳಲ್ಲಿ ಮಾತ್ರ ಅನ್ನೋಣವೇ? ಇಲ್ಲ. ಪೌರಾಣಿಕ ಪ್ರಸಂಗಗಳಿಗೂ ಈ ವಿಧದ ಆಕರ್ಷಣೆ ಅನಿವಾರ್ಯ ಎನ್ನುವಂತಿದೆ ಇಂದಿನ ಸ್ಥಿತಿ! ಭಾರತರತ್ನ ಪ್ರಸಂಗದ ಅಭಿಮನ್ಯುವಿನ ಜೊತೆಗೊಂದು ಸ್ನೇಹಿತ, ವತ್ಸಲೆಯ ಜೊತೆಗೊಂದು ಸಖಿ. ವಿದ್ಯುನ್ಮತಿ ಕಲ್ಯಾಣದ ಜಯಂತನಿಗೊಂದು ಸಖ, ವಿದ್ಯುನ್ಮತಿಗೊಂದು ಗೆಳತಿ. ಇವುಗಳ ಅವಶ್ಯಕತೆಯಿದೆಯೇ?

ಇನ್ನು ಕವಿಯ ಆಶಯವನ್ನು ಮೀರಿ ಪ್ರಸಂಗ ಬೆಳೆಯುವುದನ್ನು ಗಮನಿಸಿ..ಭೀಷ್ಮವಿಜಯ ಎನ್ನುವುದು ಅಂಬಾಪ್ರತಾಪವಾಗಿದೆ! ಗದಾಯುದ್ಧ ಅನಭಿಷಿಕ್ತ ಸಮ್ರಾಟನಾಗಿ (ಸಾಮ್ರಾಟ ಎನ್ನುವ ತಪ್ಪುಬಳಕೆಯಿದೆ) ಮೆರೆಯುತ್ತಿದ್ದಾನೆ. ಇದೆಲ್ಲವೂ ಓರ್ವ ಕಲಾವಿದನ ವಿಜೃಂಭಣೆಯಲ್ಲದೇ, ಇಡೀ ಪ್ರಸಂಗದ ಅನಾವರಣವೇ?? ಹಾಗಾದರೆ ಇಲ್ಲಿ ಕವಿ ಏನನ್ನು ಹೇಳಲು ಹೊರಟಿದ್ದಾನೆ ಎನ್ನುವ ಕಲ್ಪನೆಯೂ ಇಲ್ಲದೇ ಹೋಯಿತೇ?

ಇತ್ತೀಚಿಗೆ ಒಂದು ಹೊಸಪ್ರಸಂಗದ ಬಿಡುಗಡೆ. ಕಥೆ ಉತ್ತಮ ಮೌಲ್ಯಯುತವಾಗಿದ್ದು, ರಚನೆಯೂ ಒಳ್ಳೆಯ ಗುಣಮಟ್ಟದ್ದಾಗಿತ್ತು. ಇತ್ತೀಚಿನ ಪ್ರಸಂಗಗಳಿಗಿಂತ ಭಿನ್ನನೋಟವನ್ನು ನೀಡಬಹುದಾದ, ಸಮಾಜಕ್ಕೆ ಒಂದು ಸರಳ ಸಂದೇಶ ನೀಡಬಹುದಾದ ಪ್ರಸಂಗ ಅದಾಗಿದ್ದರೂ,ಅದರ ಪ್ರಸ್ತುತಿಯಲ್ಲಿ ಕಲಾವಿದು ಕೆಲವರ ಅವಗಣನೆಯಿಂದ ಪ್ರಸಂಗಕ್ಕೆ ಸೂಕ್ತಮೌಲ್ಯ ಸಿಗದೇ ಹೋಯಿತು. ಈ ಅವಗಣನೆಗೆ ಕಾರಣ ತಿಳಿದಾಗ ಗೊತ್ತಾದ ವಿಷಯ, ಈ ಪ್ರಸಂಗದಲ್ಲಿ ಹಾಸ್ಯ ಕಡಿಮೆ ಇದೆ ಎಂದು. ಹಾಗಾದರೆ ಹಾಸ್ಯರಸವೊಂದಿದ್ದರೆ ಮಾತ್ರ ಯಕ್ಷಗಾನ ಗೆಲ್ಲುವುದೇ? ಇಂತಹಾ ಬೆಳವಣಿಗೆಗಳು ನಮ್ಮೀ ಕಲೆಯಲ್ಲಿ ಆದಷ್ಟು ಕಡಿಮೆಯಾಗಿ ಮೌಲ್ಯಯುತ ಪ್ರಸಂಗಗಳು ರಂಗದಲ್ಲಿ ವಿಜೃಂಭಿಸಲಿ. ಪ್ರಸಂಗಕವಿಗಳ ಆಶಯ ಪೂರ್ಣವಾಗಲಿ. ಯಕ್ಷಗಾನದ ಪೂರ್ವಕವಿಗಳಿಗೂ, ವರ್ತಮಾನಕವಿಗಳಿಗೂ ಈ ವರ್ತಮಾನಪತ್ರಿಕೆ ಸಮರ್ಪಣೆ.

## ಜೀ ಚಾನೆಲ್ ಮೇಲಿನ ಮುನಿಸಿನ ಸುತ್ತ..!!

ಸದ್ಯ ಎಲ್ಲರ ಚಿತ್ತ,ಝೀ ಛಾನೆಲ್ಲತ್ತ! ಇದಕ್ಕೆ ಕಾರಣ, ಯಕ್ಷಗಾನವನ್ನು ಅವಮಾನಿಸಲಾಯ್ತು ಎನ್ನುವುದು. ಅದಕ್ಕಾಗಿ ಪ್ರತಿಭಟನೆಯಾಯ್ತು, ಕ್ಷಮೆ ಕೋರಿದ್ದೂ ಆಯ್ತು. ಇನ್ನೊಮ್ಮೆ ಇಂತಹಾ ಘಟನೆ ಮರುಕಳಿಸದಿರಲಿ ಎನ್ನುವ ಹಾರೈಕೆಯೊಂದಿಗೆ ಈ ಬರಹ.



ಯಕ್ಷಗಾನ ಕೇವಲ ಕರಾವಳಿಯ ಕಲೆಯಲ್ಲ.ಇದು ಕನ್ನಡನಾಡಿದ ಹೆಮ್ಮೆಯ ಕಲೆ. ಈ ನಿಟ್ಟಿನಲ್ಲಿ ವಿರೋಧ ವ್ಯಕ್ತವಾಗದೇ ಇದ್ದುದೊಂದು ವಿಪರ್ಯಾಸ! ಫೇಸ್ಬುಕ್ ಮೊದಲಾದ ಜಾಲತಾಣಗಳಲ್ಲಿ ಬಹಳ ತೀಕ್ಷ್ಣವಾಗಿ ವಿರೋಧದ ಮಾತುಗಳು ಕೇಳಿಬಂದರೂ, ಅದು ಕೇವಲ ಕರಾವಳಿಯ ಕಲೆ ಎಂದೇ ಗುರುತಿಸಲ್ಪಟ್ಟಿತ್ತು. ಹಾಗಾಗದೇ ಇಡೀ ರಾಜ್ಯದ ಪ್ರಾತಿನಿಧಿಕ ಕಲೆಯೆಂದು ಇದನ್ನು ಬಿಂಬಿಸುವಲ್ಲಿ ನಾವು ಸೋತಿದ್ದೇವೆಯೇ?

ಹೌದು! ಈ ಸೋಲಿಗೆ ಕಾರಣ ನಮ್ಮಲ್ಲಿನ ತಿಟ್ಟುಗಳ, ಮಟ್ಟುಗಳ ಪ್ರಬೇಧಗಳು ಹಾಗೂ ವ್ಯಕ್ತಿಕೇಂದ್ರವಾಗಿ ಈ ಕಲೆಯನ್ನು ಆರಾಧಿಸುವ, ಆಸ್ವಾದಿಸುವ ಪರಿ. ಬನ್ನಿ... ಈ ಎಲ್ಲಾ ಭೇದಗಳನ್ನು ಮರೆತು ಒಮ್ಮೆ ಮಾತಾಡೋಣ. ನಮ್ಮ ಯಕ್ಷಗಾನ ಇಂದು ಯಕ್ಷಗಾನವಾಗಿಯೇ ಉಳಿದಿದೆಯೇ? ಪಾರಂಪರಿಕ ಸೊಬಗನ್ನು ಉಳಿಸುವಲ್ಲಿ ನಾವೆಷ್ಟು ಕೊಡುಗೆ ನೀಡುತ್ತಿದ್ದೇವೆ? ಕೇವಲ ಪುರಾಣಗಳನ್ನು,  ಧರ್ಮವನ್ನು, ವಿಚಾರವಂತಿಕೆಯನ್ನು ಸಮೃದ್ಧವಾಗಿ ಕೊಡುತ್ತಿದ್ದ ಯಕ್ಷರಂಗ, ಸಾಮಾಜಿಕ ಜೀವನದ ಆಗುಹೋಗುಗಳನ್ನು ತೋರಲಿಕ್ಕಿರುವ ರಂಗವಾದುದು ಸರಿಯೇ? ಸಿನಿಮಾ ಆಧಾರಿತ ಕಥಾವಸ್ತುಗಳೇ ಇದಕ್ಕೆ ಆಕರವಾಗಬೇಕೇ? ನಮ್ಮಲ್ಲಿ ಮೌಲ್ಯವರ್ಧಿತ ಕಥಾನಕಗಳಿಗೆ ಕೊರತೆಯಾಗಿದೆಯೇ? ಇದು ಮಡಿವಂತಿಕೆಯ ಪ್ರಶ್ನೆಯಲ್ಲ. ಆದರೆ ಇಂದು ಬರಡಾಗುತ್ತಿರುವ ನಮ್ಮ ಬದುಕಿಗೆ ಬೇಕಾಗಿರುವುದು ಭಾವವಲ್ಲವೇ? ಕೃಷ್ಣಾರ್ಜುನ ಕಾಳಗದ ಸುಭದ್ರಾ–ಅರ್ಜುನರ ದಾಂಪತ್ಯದ ಭಾವ ಇಂದಿನ ಕಥೆಗಳಲ್ಲಿಲ್ಲ! ಚಕ್ರವ್ಯೂಹದಂತಹಾ ಪ್ರಸಂಗ ಮತ್ತೊಂದು ಕಾಣಲಿಕ್ಕಿಲ್ಲ. ವಾಲಿವಧೆ ಪ್ರಸಂಗದಲ್ಲಿ ಕಾಣುವ ರಾಜನೀತಿ, ದಂಡನೀತಿ, ಜೀವ ಸ್ವಾತಂತ್ರ್ಯ, ಜೀವ ಕಾರುಣ್ಯದಂತಹಾ ವಿಷಯಗಳು ಈಗ ರಂಗದಲ್ಲಿಲ್ಲ. ಕೇವಲ ಹಾಸ್ಯರಸವೊಂದಿದ್ದರೆ ಸಾಕೆನ್ನುವ ಮೇಳದ ಯಜಮಾನರು, ತನ್ನ ಸಾಮರ್ಥ್ಯ ತೋರಿಸಲು ಭಾಮಿನೀ, ರೂಪಕತಾಳದ ಪದ್ಯಗಳೇ ಹೆಚ್ಚಿರಲಿ ಎನ್ನುವ ಭಾಗವತರು, ತನಗೆ ರಂಗದಲ್ಲಿ ಕಾಣಿಸಿಕೊಳ್ಳುವ ಪದ್ಯ, ಸನ್ನಿವೇಶವೇ ಬೇಕೆನುವ ವೇಷಧಾರಿಗಳು ಇವರಿಂದ ಏನನ್ನು ನಿರೀಕ್ಷಿಸಲಾದೀತು? ಕಾಲಮಿತಿಯ ಕಾರಣದಿಂದ ಇಡೀ ಪ್ರಸಂಗ ಸಾರುವ ಸಂದೇಶವನ್ನು ಪ್ರದರ್ಶನ ನೀಡುತ್ತಿದೆಯೇ? ಯೋಚಿಸಿ...ರಾವಣವಧೆಯ ರಾವಣ ಮಹಾನ್ ನಾಯಕನಾಗಿ ವಿಜೃಂಭಿಸಲು, ಕರ್ಣ, ಕೌರವರು ಧೀರೋದಾತ್ತ ನಾಯಕರಾಗಲು ಯಾರು ಕಾರಣ? ಪ್ರಸಂಗದ ಆಶಯ ಅದೇ ಆಗಿತ್ತೇ? ಇಲ್ಲವಲ್ಲ.. ರಾವಣವಧೆಯ ಕೊನೆಭಾಗದಲ್ಲಿ ಬರುವ ರಾಮನ ಚಿತ್ರಣ, ಕರ್ಣಪರ್ವದ ಧರ್ಮರಾಯನ ಮಹತ್ವ, ಗದಾಯುದ್ಧದ ಕೃಷ್ಣನ ಮಾತು ಇವೆಲ್ಲವೂ ಮರೆಯಾಗಿ ಮೆರೆಯಬಾರದ್ದು ಮೆರೆಯುವುದು ಅಪಚಾರವಲ್ಲವೇ? ಸಿನಿಮಾಗೀತೆಗಳು ರಂಗವಾಳುವುದು ಅಪಚಾರವಲ್ಲವೇ? ಭಾವನಾತ್ಮಕ ಸನ್ನಿವೇಶವನ್ನು ಹಾಳುಮಾಡುವ ಹಾಸ್ಯಪಾತ್ರಗಳಿಂದ ಅಪಚಾರವಾಗಿಲ್ಲವೇ? ಸಂಪ್ರದಾಯರೂಪಿತ ವೇಷಗಾರಿಕೆ ಬೇಡ, ನಾಟಕೀಯ ವೇಷ ಸಾಕೆನ್ನುವುದು ಅಪಚಾರವಾಗದೇ? ಹೇಳುತ್ತಾ ಹೋದರೆ, ಇಂತಹಾ ಅನೇಕ ಅಪಸವ್ಯಗಳ ಪಟ್ಟಿಯೇ ಇದೆ. ಇದನ್ನೆಲ್ಲಾ ನೈಜ ಕಲಾಭಿಮಾನಿಗಳು ಗಮನಿಸಿ, ಸೂಕ್ತವಾಗಿ ಸ್ಪಂದಿಸಿದಾಗ ಮಾತ್ರ ಬದಲಾವಣೆ ಸಾಧ್ಯ. ಇಲ್ಲವಾದರೆ ಪ್ರೇಕ್ಷರಿಗಾಗಿ ನಾವು ಎನ್ನುವುದೇ ಕಲಾವಿದರ ಉತ್ತರವಾಗಿರುತ್ತದೆ. ಇದರಿಂದ ಕಲೆಯ ಎತ್ತರ? ಕುಸಿಯುವುದು ನಿಶ್ಚಿತ. ದಯಮಾಡಿ ಈ ನಿಟ್ಟಿನಲ್ಲಿ ಗಮನಹರಿಸೋಣ. **– ಲೇಖಕರು – ಅಜಿತ್ ಕಾರಂತ್**

## ಯಕ್ಷಗಾನ ಕಲಾವಿದರಿಗೆ ಬಿರುದುಗಳು ಎಷ್ಟು ಅವಶ್ಯ?

***ಯಕ್ಷಗಾನದ ಸವ್ಯಸಾಚಿಯೆಂದರೆ ಉತ್ತಮ ಮಾತುಗಾರ, ಉತ್ತಮ ನಾಟ್ಯಗಾರ, ಉತ್ತಮ ಭಾಗವತ, ಉತ್ತಮ ಹಿಮ್ಮೇಳ ವಾದಕ, ಉತ್ತಮ ಪ್ರಸಂಗಕರ್ತ, ನಿರ್ದೇಶಕ, ಪ್ರಸಂಗದ ಮಾಹಿತಿ ಬಲ್ಲವ , ರಾಗ ತಾಲಗಳ ಪರಿಪೂರ್ಣ ಜ್ಞಾನ, ರಂಗಸ್ಥಳದ ನಡೆ – ಈ ಎಲ್ಲಾ ಅಂಗಗಳಲ್ಲಿ ಪರಿಣತಿ ಹೊಂದಿರಬೇಕು. ಈ ಅಂಗಗಳಲ್ಲಿ ಒಂದರಲ್ಲಾದರೂ ಕೊರತೆ ಇದ್ದರೆ, ಆ ಕಲಾವಿದ "ಸವ್ಯಸಾಚಿ" ಹೇಗೆ ಆದಾನು ಅಲ್ಲವೇ? ಅಂದರೆ, ಬಿರುದು ನೀಡುವಲ್ಲಿ ವಿವೇಚನೆ ಬೇಕು.***




ಇತ್ತೀಚಿಗೆ ಯಕ್ಷಗಾನ ಕಲಾವಿದರಿಗೆ ಬಿರುದು ನೀಡುವ ಪರಿಪಾಠ ಬೆಳೆದು ಬಂದಿದೆ. ಈ ಬಿರುದುಗಳು ಯಾವನೇ ಕಲಾವಿದರಿಗೆ ಅವರ ಪ್ರತಿಭೆಗೆ ಅರ್ಹವಾಗಿ ಸಲ್ಲಬೇಕೇ ಹೊರತು, ಕಲಾಭಿಮಾನಿಗಳ ಅಂಧ ಅಭಿಮಾನದಿಂದಲ್ಲ ಎಂಬ ಸತ್ಯ ನಾವು ಮನಗಾಣಬೇಕು. ಇತ್ತೀಚಿಗೆ ಈ "ಬಿರುದು ಪ್ರದಾನ" ಎಲ್ಲಿವರೆಗೆ ಮುಟ್ಟಿದೆ ಎಂದರೆ, ಆ ಬಿರುದಿಗೂ, ಕಲಾವಿದರ ಸಾಧನೆಗೂ ಏನೇನೂ ಸಮನ್ವಯತೆ ಇಲ್ಲದ ಮಟ್ಟಿಗೆ. ಒಂದೆರಡು ಕಾರ್ಯಕ್ರಮಗಳಲ್ಲಿ ಮಿಂಚಿದ ಯುವ ಕಲಾವಿದರಿಗೆ, ಕೊಡುವ ಬಿರುದುಗಳು, ಅವರನ್ನು ಹೊರಲಾರದಷ್ಟು ಮಟ್ಟಕ್ಕೆ ಮುಟ್ಟಿದೆ. ಕೆಲವು ಬಿರುದುಗಳಂತೂ ಅವರ ಸಾಧನೆಗೂ ವಾಸ್ತವಿಕತೆಗೂ ಒಂದಿನಿತೂ ಹೊಂದಾಣಿಕೆ ಆಗಲಾರದು ಎಂಬುದು ಹಗಲಿನಷ್ಟು ಸತ್ಯ. ಯಕ್ಷಮಾಣಿಕ್ಯ, ಭಾಗವತೋತ್ತಮ, ಭಾಗವತ ಕುಲತಿಲಕ ಇತ್ಯಾದಿ ಬಿರುದುಗಳನ್ನು ಯುವ ಕಲಾವಿದರಿಗೆ ನೀಡಿದರೆ, ಅವರಿಗಿಂತಲೂ ಹಿರಿಯ ಕಲಾವಿದರಿಗೆ ಯಾವ ಬಿರುದನ್ನು ನೀಡುವುದು? ಸುಮಾರು ನಾಲ್ಕು ವರ್ಷಗಳಹಿಂದೆ ಸುಪ್ರಸಿದ್ಧ ಯುವ ಭಾಗವತ ಕಲಾವಿದರಿಗೆ ಸಾರ್ವಜನಿಕ ನೆಲೆಯಲ್ಲಿ ಮೂಡುಬಿದಿರೆಯಲ್ಲಿ "ಸಂಮಾನ" ಏರ್ಪಡಿಸಿದಾಗ ಆ ಯುವ ಕಲಾವಿದರಿಗೆ ಬಿರುದು ನೀಡಬೇಕು ಎಂದು ಸಂಘಟಕರು ಅಪೇಕ್ಷಿಸಿದ್ದರು. ಆಗ ಕಮಿಟಿಯಲ್ಲಿ ನಾನೂ ಇದ್ದ ಕಾರಣ ಈ ಬಿರುದು ಪ್ರದಾನವನ್ನು ವಿರೋಧಿಸಿದ್ದೆ. ಯುವ ಭಾಗವತರಿಗೆ ದೊಡ್ಡ ದೊಡ್ಡ ಬಿರುದು ನೀಡುವುದಾದರೆ, ಯಕ್ಷರಂಗದ ದಂತಕಥೆ ಎನಿಸಿದ ಬಲಿಪ ನಾರಾಯಣ ಭಾಗವತರಿಗೆ ಯಾವ ಬಿರುದು ನೀಡಬೇಕು? ಎಂದು ಆಕ್ಷೇಪಿಸಿದಾಗ, ಬಿರುದು ಪ್ರದಾನದ ಕಾರ್ಯಸೂಚಿ ರದ್ದಾಯಿತು. ಒಬ್ಬರಿಗೆ ಬಿರುದು ನೀಡುವಾಗ ಅವರಿಗಿಂತಲೂ ಹಿರಿಯರಿಗೆ ಆ ಬಿರುದು ತೊಡಕಾಗಬಾರದು ತಾನೇ? ಹಾಗೆಂದು ಕಲಾವಿದರಿಗೆ ಬಿರುದು ನೀಡಲೇಬಾರದು ಎಂದು ನನ್ನ ವಾದವಲ್ಲ . ವಯಸ್ಸಿನಲ್ಲಿ ಪರಿಪಕ್ವತೆ ಹೊಂದಿದ, ಯಕ್ಷಗಾನ ಕ್ಷೇತ್ರದಲ್ಲಿ ಅಪಾರವಾದ ಸಾಧನೆ ಮಾಡಿದ ಸಾಧಕರಿಗೆ ಬಿರುದುಗಳು ಸಲ್ಲಬೇಕೇ ಹೊರತು, ಕೇವಲ ಅಭಿಮಾನದಿಂದಲೋ, ದುರಭಿಮಾನದಿಂದಲೋ ನೀಡುವ ಬಿರುದುಗಳು ಅರ್ಥಹೀನ .



**ಎಂ.ಶಾಂತರಾಮ ಕುಡ್ವ**

ಯಕ್ಷಗಾನ ಕಲಾವಿದರಿಗೆ ಬಿರುದು ನೀಡುವುದು ಇತ್ತೀಚಿನ ಬೆಳವಣಿಗೆಯೇನಲ್ಲ. ನಾಲ್ಕೈದು ದಶಕಗಳ ಹಿಂದೆಯೇ, ಡಾ. ಶೇಣಿ ಗೋಪಾಲಕೃಷ್ಣ ಭಟ್ಟರಿಗೆ " ಯಕ್ಷರಂಗದ ಭೀಷ್ಮ ", ತೆಕ್ಕಟ್ಟೆ ಆನಂದ ಮಾಸ್ತರರಿಗೆ " ಯಕ್ಷಗಾನದ ವಿಶ್ವಕೋಶ", ಕೆ.ಗೋವಿಂದ ಭಟ್ಟರಿಗೆ "ಯಕ್ಷರಂಗದ ಸವ್ಯಸಾಚಿ", ಪುತ್ತೂರು ನಾರಾಯಣ ಹೆಗ್ಡೆಯವರಿಗೆ "ರಂಗಸ್ಥಳದ ರಾಜ", ಪುತ್ತೂರು ಶ್ರೀಧರ ಭಂಡಾರಿಯವರಿಗೆ ದಕ್ಕಿದ "ಯಕ್ಷರಂಗದ ಸಿಡಿಲಮರಿ " ಇತ್ಯಾದಿ ಅರ್ಹವಾಗಿಯೇ ನೀಡಲ್ಪಟ್ಟ ಬಿರುದುಗಳು. (ಈ ಬಿರುದುಗಳು ಇದೀಗ ಹಲವಾರು ಕಲಾವಿದರಿಗೆ ನೀಡಲ್ಪಟ್ಟಿವೆ ) ಈ ಬಿರುದುಗಳಿಗೆ ಆ ಕಲಾವಿದರು ತಮ್ಮ ಅಪೂರ್ವವಾದ ಸಾಧನೆಯಿಂದ ಅರ್ಹರೂ ಆಗಿದ್ದರು. ಆದರೆ ಇತ್ತೀಚೆಗೆ ಹತ್ತಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಈ ಮೇಲಿನ ಬಿರುದುಗಳನ್ನು ನೀಡಿದರೆ ಅದು ಸಾಧುವೇ ಎಂದು ಯೋಚಿಸಬೇಕಾಗುತ್ತದೆ. ಸಣ್ಣ ಪ್ರಾಯದಲ್ಲೇ ದೊಡ್ಡ ಬಿರುದುಗಳನ್ನು ನೀಡಿದರೆ, ಅದು ಕಲಾವಿದರ ಬೆಳವಣಿಗೆಗೆ ಮಾರಕವಾಗಬಹುದು. ತಾನು ದೊಡ್ಡ ಸಾಧನೆ ಮಾಡಿದವ ಎಂಬ ಮನೋಭಾವವು ಯುವ ಕಲಾವಿದರಲ್ಲಿ ಮೂಡಿದರೆ, ಅದು ಆ ಯುವ ಕಲಾವಿದನಿಗೆ ಇನ್ನಷ್ಟು ಸಾಧನೆ ಮಾಡಲು ಅಡ್ಡ ಬೇಲಿಯಾಗಲಾರದೇ ? ಕೆಲವೊಂದು ಕಲಾವಿದರಿಗೆ ನೀಡಿದ ಬಿರುದುಗಳಿಗೂ, ಆ ಕಲಾವಿದರ ಸ್ಥಾನಕ್ಕೂ ಒಂದಿನಿತೂ ತಾಳೆಯಾಗಲಾರದ ಅದೆಷ್ಟೋ ಉದಾಹರಣೆಗಳಿವೆ. ಒಬ್ಬ ಯುವ ಕಲಾವಿದನಿಗೆ "ಯಕ್ಷರಂಗದ ಸವ್ಯಸಾಚಿ" ಬಿರುದು ನೀಡಿದರೆ ಅದೆಷ್ಟು ಸಮಂಜಸ ಎಂದು ಯೋಚಿಸಬೇಕಾಗುತ್ತದೆ . "ಸವ್ಯಸಾಚಿ" ಅಂದರೆ "Allrounder" ಎಂಬ ಇಂಗ್ಲಿಷ್ ಭಾಷೆಯ ಸಮಾನಾರ್ಥ ಪದವಾಗಿದೆ . ಕ್ರಿಕೆಟ್‌ನಲ್ಲಿ ಸವ್ಯಸಾಚಿ ಎಂಬ ಪದವು ಬಳಕೆಯಲ್ಲಿದೆ. ಅಂದರೆ ದಾಂಡಿಗನೋರ್ವ ಉತ್ತಮ ಬ್ಯಾಟ್ಸ್ ಮ್ಯಾನ್, ಉತ್ತಮ ಬೌಲರ್, ಉತ್ತಮ ಫೀಲ್ಡರ್ ಹಾಗೂ ಉತ್ತಮ ವಿಕೆಟ್ ಕೀಪರ್ – ಹೀಗೆ ಎಲ್ಲಾ ಅಂಗಗಳನ್ನು ಬಲ್ಲವನಾಗಿರಬೇಕು. ಅದೇ ಅರ್ಥ ಹುಡುಕಿ ಹೋದರೆ, ಯಕ್ಷಗಾನದ ಸವ್ಯಸಾಚಿಯೆಂದರೆ ಉತ್ತಮ ಮಾತುಗಾರ, ಉತ್ತಮ ನಾಟ್ಯಗಾರ, ಉತ್ತಮ ಭಾಗವತ, ಉತ್ತಮ ಹಿಮ್ಮೇಳ ವಾದಕ, ಉತ್ತಮ ಪ್ರಸಂಗಕರ್ತ, ನಿರ್ದೇಶಕ, ಪ್ರಸಂಗದ ಮಾಹಿತಿ ಬಲ್ಲವ , ರಾಗ ತಾಲಗಳ ಪರಿಪೂರ್ಣ ಜ್ಞಾನ, ರಂಗಸ್ಥಳದ ನಡೆ – ಈ ಎಲ್ಲಾ ಅಂಗಗಳಲ್ಲಿ ಪರಿಣತಿ ಹೊಂದಿರಬೇಕು ಎಂಬುದು ಸತ್ಯ ತಾನೇ? ಈ ಅಂಗಗಳಲ್ಲಿ ಒಂದರಲ್ಲಾದರೂ ಕೊರತೆ ಇದ್ದರೆ, ಆ ಕಲಾವಿದ "ಸವ್ಯಸಾಚಿ" ಹೇಗೆ ಆದಾನು ಅಲ್ಲವೇ? ಅಂದರೆ, ಬಿರುದು ನೀಡುವಲ್ಲಿ ವಿವೇಚನೆ ಬೇಕು. ಆ ಬಿರುದು, ಆ ಕಲಾವಿದರ ಸಾಧನೆಗೆ ಅನ್ವರ್ಥವಾಗಿಯೂ ಇರಬೇಕು ಅಲ್ಲವೇ? ಹಿಮ್ಮೇಳ ಕಲಾವಿದರಿಗೆ ನೀಡಬಹುದಾದ ಬಿರುದನ್ನು ಮುಮ್ಮೇಳದ ಕಲಾವಿದರಿಗೋ, ಮುಮ್ಮೇಳದ ಕಲಾವಿದರಿಗೆ ನೀಡಬಹುದಾದ ಬಿರುದನ್ನು ಹಿಮ್ಮೇಳ ಕಲಾವಿದರಿಗೋ ನೀಡಿದರೆ, ಅಥವಾ ಭರತ ನಾಟ್ಯ ಅಥವಾ ಇನ್ನಿತರ ಕಲೆಗಳ ಸಾಧಕರಿಗೆ ಸಲ್ಲಬೇಕಾದ ಬಿರುದನ್ನು ಯಕ್ಷಗಾನ ಕಲಾವಿದರಿಗೆ ನೀಡಿದರೆ, ಅದೊಂದು ಅಭಾಸ ಆಗಲಾರದೇ? ಆದುದರಿಂದ , ಬಿರುದುಗಳು ಬೇಕು, ಆದರೆ ಬಿರುದುಗಳನ್ನು ನೀಡುವಲ್ಲಿ ವಿವೇಚನೆಯೂ ಬೇಕು. – **ಲೇಖಕರು – ಎಂ.ಶಾಂತರಾಮ ಕುಡ್ವ**

***ತೂಕದ ಮಾತು – "ವಾದವಿವಾದಗಳಿಂದ ತಾಳಮದ್ದಲೆ ನಿಲ್ಲುವುದಕ್ಕೆ ಕಾರಣ ಒಣ ಪ್ರತಿಷ್ಠೆ. ತಾಳಮದ್ದಲೆಗೆ ಬಂದು ಕೂತವರು ಗೆಲ್ಲತಕ್ಕದ್ದು ಎಂಬ ಮಾನಸಿಕ ಧೋರಣೆ ಇಲ್ಲಿ ತಾಳಮದ್ದಲೆ ಗೆಲ್ಲುವುದಲ್ಲ ವ್ಯಕ್ತಿ ಗೆಲ್ಲುವುದು. ವಾಸ್ತವದಲ್ಲಿ ತಾಳಮದ್ದಲೆ ಗೆಲ್ಲಬೇಕು" – ಮೂಡಂಬೈಲು ಗೋಪಾಲಕೃಷ್ಣ ಶಾಸ್ತ್ರಿ (ಕೃಪೆ – ಬಯಲಾಟ ಜಾಲತಾಣ ಸಂದರ್ಶನ)***

**ಗಮನಿಸಿ– ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಅನಿಸಿಕೆ ಅಭಿಪ್ರಾಯಗಳು ಲೇಖಕರದ್ದೇ ಹೊರತು, ಸಂಪಾದಕ ಮಂಡಳಿಯದ್ದಲ್ಲ. ನಿಮ್ಮ ಪ್ರತಿಕ್ರಿಯೆಯನ್ನು ಕಳುಹಿಸಬೇಕಾದ ಇ–ಮೇಲ್ – nadanoopuravandaru@gmail.com ಮೊಬೈಲ್ ಸಂಖ್ಯೆ– 9449686807 ನಮ್ಮ ವೆಬ್ ಸೈಟ್ ವಿಳಾಸ– https://nyt.1ngo.in/ – ಸಂಪಾದಕರು**

# ಯಕ್ಷಗಾನ ಪ್ರಸಂಗ ಪ್ರಯೋಗ ಲೆಕ್ಕಾಚಾರ

*೧೪-೧೫ ನೇ ಶತಮಾನದಿಂದ ೧೮ನೇ ಶತಮಾನದ ಆದಿಯವರೆಗೆ ಸರಿಸುಮಾರು ೧೦೦ ಪ್ರಸಂಗಗಳು ಮಾತ್ರ ದೊರೆಯುತ್ತವೆ. ಆದರೆ ೧೮ನೇ ಶತಮಾನದ ನಂತರ ಪ್ರಸಂಗಗಳು ದೊಡ್ಡ ಸಂಖ್ಯೆಯಲ್ಲಿ ರಚಿತವಾದವು. ಬಹುಶಃ ಆ ಸಮಯದಲ್ಲಿ ಪ್ರದರ್ಶನ ಮತ್ತು ಮೇಳಗಳ ಸಂಖ್ಯೆ ಹೆಚ್ಚಾಗಿರುವುದು ಈ ಬೆಳವಣಿಗೆಯ ಮುಖ್ಯ ಕಾರಣವಾಗಿರಬೇಕು. ಯಕ್ಷಗಾನದ ಇತಿಹಾಸವನ್ನು ನೋಡುವಾಗ ಪ್ರಸಂಗಗಳ ಪ್ರಯೋಗದಲ್ಲಿ ಭಾಗವತರ ಪಾತ್ರ ಅತಿ ಮಹತ್ವದೆನಿಸುತ್ತದೆ. ಪಾರ್ತಿಸುಬ್ಬನಿಂದ ಹಿಡಿದು ಸಮಕಾಲೀನ ಯಕ್ಷಕವಿಗಳಾದ ಹೊಸ್ತೋಟ ಮಂಜುನಾಥ ಭಾಗವತರು, ಬಲಿಪ ನಾರಾಯಣ ಭಾಗವತ, ಪುರುಷೋತ್ತಮ ಪೂಂಜರರು ಸೇರಿದಂತೆ ಅನೇಕರು ಭಾಗವತರಾಗಿದ್ದರು ಜೊತೆಗೆ ಪ್ರಸಂಗಕರ್ತರೂ ಆಗಿದ್ದರು.*





ರವಿ ಮಡೋಡಿ

ಕಲೆ ನಮ್ಮ ಭಾವನೆಗಳ ಮೇಲೆ, ಅರಿವಿನ ಮೇಲೆ ಬುದ್ಧಿಪೂರ್ವಕವಾದ ಪರಿಣಾಮವನ್ನು ಬೀರಿದರೆ ಅದರ ಉದ್ದೇಶ ಸಾಫಲ್ಯವನ್ನು ಹೊಂದುತ್ತದೆ. ಕಾಲ ಕಳೆದಂತೆ ನಮ್ಮ ಯೋಚನೆಗಳು, ಬದುಕಿನ ಶೈಲಿಗಳು ಬದಲಾಗುವುದು ಸಾಮಾನ್ಯವಾದ ಸಂಗತಿ. ಅದಕ್ಕೆ ಪೂರಕವಾಗಿ ಕಲೆಗಳು ಅಭಿವ್ಯಕ್ತಿಗೊಳ್ಳಬೇಕು. ಹಾಗಿದ್ದಾಗ ಮಾತ್ರ ಕಲೆ ಉಳಿಯುತ್ತದೆ ಹಾಗೂ ಅತ್ಯಂತ ಪರಿಣಾಮಕಾರಿ ಎನಿಸಿಕೊಳ್ಳುತ್ತದೆ. ಇದು ನಮ್ಮ ಯಕ್ಷಗಾನಕ್ಕೂ ಅನ್ವಯವಾಗುತ್ತದೆ. ಯಕ್ಷಗಾನದಲ್ಲಿ ಪ್ರಯೋಗಗಳು ಹೊಸತಲ್ಲ. ಬೇರೆ ಕಲೆಗಳೊಂದಿಗೆ ಸಮನ್ವಯಗೊಳಿಸುವ, ರಂಗದಲ್ಲಿ ಬೇರೆ ಪಕ್ಕವಾದ್ಯಗಳನ್ನು ಅಳವಡಿಸುವ, ನೃತ್ಯರೂಪಕಗಳ ಮೂಲಕ ಪ್ರಸಂಗಗಳನ್ನು ಪ್ರದರ್ಶಿಸುವ, ಏಕವ್ಯಕ್ತಿ ತಾಳಮದ್ದಲೆ/ರಂಗಪ್ರದರ್ಶನವನ್ನು ಮಾಡುವ ಇತ್ಯಾದಿ ಪ್ರಯತ್ನಗಳು ಇಲ್ಲಿ ಹಲವು ದಶಕಗಳಿಂದ ಸಂಪನ್ನವಾಗುತ್ತಿದೆ. ಯಕ್ಷಗಾನದ ಜೀವಾಳವಾಗಿರುವ ಪ್ರಸಂಗಗಳಲ್ಲೂ ಕೂಡ ಸಾಕಷ್ಟು ಪ್ರಯೋಗಗಳು ನಡೆದಿವೆ.

ಯಕ್ಷಗಾನದ ಪ್ರಸಂಗ ಪ್ರಯೋಗಗಳ ಇತಿಹಾಸವನ್ನು ಗಮನಿಸುವಾಗ ೧೮ರಿಂದ ೨೦ನೇ ಶತಮಾನದವರೆಗೆ ಉಚ್ಛ್ರಾಯ ಸ್ಥಿತಿಯಲ್ಲಿದ್ದುದನ್ನು ಕಾಣಬಹುದು. ಈಗ ಉಪಲಬ್ಧವಿರುವ ಪ್ರಸಂಗಗಳನ್ನು ಆಧರಿಸಿ ಹೇಳುವುದಾದರೆ ೧೪-೧೫ ನೇ ಶತಮಾನದಿಂದ ೧೮ನೇ ಶತಮಾನದ ಆದಿಯವರೆಗೆ ಸರಿಸುಮಾರು ೧೦೦ ಪ್ರಸಂಗಗಳು ಮಾತ್ರ ದೊರೆಯುತ್ತವೆ. ಆದರೆ ೧೮ನೇ ಶತಮಾನದ ನಂತರ ಪ್ರಸಂಗಗಳು ದೊಡ್ಡ ಸಂಖ್ಯೆಯಲ್ಲಿ ರಚಿತವಾದವು. ಬಹುಶಃ ಆ ಸಮಯದಲ್ಲಿ ಪ್ರದರ್ಶನ ಮತ್ತು ಮೇಳಗಳ ಸಂಖ್ಯೆ ಹೆಚ್ಚಾಗಿರುವುದು ಈ ಬೆಳವಣಿಗೆಯ ಮುಖ್ಯ ಕಾರಣವಾಗಿರಬೇಕು. ಯಕ್ಷಗಾನದ ಇತಿಹಾಸವನ್ನು ನೋಡುವಾಗ ಪ್ರಸಂಗಗಳ ಪ್ರಯೋಗದಲ್ಲಿ ಭಾಗವತರ ಪಾತ್ರ ಅತಿ ಮಹತ್ವದೆನಿಸುತ್ತದೆ. ಪಾರ್ತಿಸುಬ್ಬನಿಂದ ಹಿಡಿದು ಸಮಕಾಲೀನ ಯಕ್ಷಕವಿಗಳಾದ ಹೊಸ್ತೋಟ ಮಂಜುನಾಥ ಭಾಗವತರು, ಬಲಿಪ ನಾರಾಯಣ ಭಾಗವತ, ಪುರುಷೋತ್ತಮ ಪೂಂಜರರು ಸೇರಿದಂತೆ ಅನೇಕರು ಭಾಗವತರಾಗಿದ್ದರು ಜೊತೆಗೆ ಪ್ರಸಂಗಕರ್ತರೂ ಆಗಿದ್ದರು. ಅವರುಗಳಿಗೆ ರಂಗದ ಸಮಗ್ರ ಕಲ್ಪನೆ ಇರುವ ಕಾರಣಕ್ಕೆ ಅಥವಾ ರಾಗ-ತಾಳ-ಮಟ್ಟು ಈ ಬಗ್ಗೆ ಹಿಡಿತವಿರುವುದರಿಂದ ತಮ್ಮ ಪ್ರಸಂಗಗಳನ್ನು ಅಥವಾ ಮತ್ತೊಬ್ಬ ಕವಿಯ ಪ್ರಸಂಗಗಳನ್ನು ರಂಗದಲ್ಲಿ ಅಳವಡಿಸಲು ಹೆಚ್ಚು ಸಹಾಯಕವಾಯಿತು ಎನ್ನಬಹುದು. ಹೀಗಾಗಿ ಈ ಕಾರಣದಿಂದ ದೊಡ್ಡ ಸಂಖ್ಯೆಯಲ್ಲಿ ಪ್ರಸಂಗಗಳು ಪ್ರದರ್ಶನದ ಭಾಗ್ಯವನ್ನು ಕಂಡಿವೆ ಮತ್ತು ಅದು ರಂಗದಲ್ಲಿ ಯಶಸ್ವಿಯಾಗಿವೆ. ಇದರ ಜೊತೆಗೆ ಭಾಗವತರಲ್ಲವರು ಕೂಡ ಅನೇಕರು ಹೊಸ ಪೌರಾಣಿಕ ಪ್ರಸಂಗಗಳನ್ನು ಅಳವಡಿಸುವ ಸಾಹಸಕ್ಕೆ ಮುಂದಾಗಿರುವುದಿದೆ. ಆದರೆ ಕಳೆದ ಕೆಲವು ದಶಕಗಳಿಂದ ನಮ್ಮ ಯಕ್ಷಗಾನ ರಂಗಭೂಮಿಯನ್ನು ಗಮನಿಸುವಾಗ ಹೊಸ ಪೌರಾಣಿಕ ಪ್ರಸಂಗಗಳ ಪ್ರಯೋಗಗಳು ಕಡಿಮೆಯಾಗಿವೆ ಎನ್ನಬಹುದು. ಇದರ ಜೊತೆಗೆ ಹಿಂದೆ ಚಾಲ್ತಿಯಲ್ಲಿದ್ದ ಪ್ರಸಂಗಗಳ ಸಂಖ್ಯೆಯೂ ಕೂಡ ಗಣನೀಯವಾಗಿ ಕುಸಿದಿವೆ. ಒಂದು ಅಂದಾಜಿನ ಪ್ರಕಾರ ಇಂದು ಬಡಗಿನಲ್ಲಿ ೪೦-೫೦ ಪ್ರಸಂಗಗಳು, ತೆಂಕಿನಲ್ಲಿ ೮೦-೯೦ ಪ್ರಸಂಗಗಳಿಗೆ ಈಗ ರಂಗ ಸೀಮಿತವಾಗಿದೆ. ಹಾಗಂತ ಹೊಸ ಪೌರಾಣಿಕ ಪ್ರಸಂಗಗಳ ಪ್ರಯೋಗಗಳೇ ಕಾಣುತ್ತಿಲ್ಲವೆಂಬುದು ಇದರ ಅರ್ಥವಲ್ಲ. ಇತ್ತಿಚೀನ ವರುಷಗಳಲ್ಲಿ ಹೊಸ ಪೌರಾಣಿಕ ಪ್ರಸಂಗಗಳು ರಂಗದಲ್ಲಿ ಪ್ರಯೋಗಗಳು ಕಾಣಿಸುತ್ತಿವೆ. ಆದರೆ ಕೆಲವೇ ಕೆಲವು ಪ್ರದರ್ಶನಕಷ್ಟೇ ಸೀಮಿತವಾಗಿ ಮರೆಯಾಗುತ್ತಿರುವುದು ವಾಸ್ತವ ಸಂಗತಿಯಾಗಿದೆ.

ಹೊಸ ಪೌರಾಣಿಕ ಪ್ರಸಂಗಗಳನ್ನು ರಂಗದಲ್ಲಿ ಅಳವಡಿಸುವುದಕ್ಕೆ ತನ್ನದೇಯಾದ ಸವಾಲುಗಳನ್ನು ಹೊಂದಿರುವುದು ವಾಸ್ತವ ಸಂಗತಿ. ಈ ನಿಟ್ಟಿನಲ್ಲಿ ಕೆಲವು ಸಮಸ್ಯೆಗಳನ್ನು ತಿಳಿಯುವ ಪ್ರಯತ್ನವನ್ನು ಮಾಡೋಣ

ಹೊಸ ಪ್ರಸಂಗಗಳನ್ನು ರಂಗಕ್ಕೆ ಅಳವಡಿಸುವಾಗ ಸಿದ್ಧ ಮಾದರಿ ಎಂಬುದಿರುವುದಿಲ್ಲ. ಇದೇ ಕಾರಣಕ್ಕೆ ಅದು ಹೆಚ್ಚು ಶ್ರಮವನ್ನು ಅಪೇಕ್ಷಿಸುತ್ತವೆ. ಇಂದಿನ ಧಾವಂತದ ಬದುಕಿನಲ್ಲಿ ಇದಕ್ಕೆ ಸಮಯವನ್ನು ವ್ಯಯಿಸುವುದಕ್ಕೆ ಎಲ್ಲ ಕಲಾವಿದರು ಸಿದ್ಧರಿರಬೇಕಾಗುತ್ತದೆ.

ಹೊಸ ಪ್ರಯೋಗಗಳು ಅಚ್ಚುಕಟ್ಟಾಗಿ, ಪರಿಣಾಮಕಾರಿಯಾಗಿ ಮೂಡಿಬರಬೇಕಾದರೆ ಪ್ರಸಂಗಗಳನ್ನು ನಿರ್ದೇಶಿಸುವ ನಿರ್ದೇಶಕರು ಬೇಕಾಗುತ್ತದೆ. ಇದಕ್ಕೆ ಭಾಗವತರು, ರಂಗದ ಕಲಾವಿದರು ಅಥವಾ ಹೊರಗಿನ ವ್ಯಕ್ತಿ ಕೂಡ ಆಗಬಹುದು. ಅಲ್ಲೀನ ಪಾತ್ರಗಳನ್ನು, ಪದ್ಯಗಳನ್ನು, ದೃಶ್ಯಗಳನ್ನು ಆಯ್ಕೆ ಮಾಡಿ ರಂಗನಡೆಯನ್ನು ರೂಪಿಸುವುದು ಸುಲಭವಲ್ಲ. ಪಾತ್ರಗಳಿಗೆ ಕಲಾವಿದರ ಆಯ್ಕೆ, ಪ್ರಸಂಗದ ಆಶಯ, ಸಂಭಾಷಣೆಗಳು, ಪದ್ಯಗಳ ಭಾವ, ರಂಗತಂತ್ರ ಇತ್ಯಾದಿಗಳ ಬಗ್ಗೆ ಹೆಚ್ಚು ಯೋಚಿಸಿ ಸರ್ವ ಕಲಾವಿದರನ್ನು ಅದಕ್ಕೆ ಅಣಿಗೊಳಿಸಿ ಸನ್ನಾಹಗೊಳಿಸುವುದು ಹೆಚ್ಚು ಸಾಹಸದಂತೆ ತೋರುತ್ತದೆ.

ಹೊಸ ಪ್ರಯೋಗಗಳಿಗೆ ಪ್ರದರ್ಶನದ ಅವಕಾಶಗಳ ಕೊರತೆ ಯಕ್ಷಗಾನ ವಲಯದಲ್ಲಿದೆ. ಸಂಘಟಕರು/ಮೇಳಗಳು/ಕಲಾವಿದರು ಈ ಬಗ್ಗೆ ಮುಕ್ತರಾಗಿದ್ದರೆ ಮಾತ್ರ ಹೊಸ ಪ್ರಯೋಗಗಳನ್ನು ಪ್ರದರ್ಶಿಸುವುದಕ್ಕೆ ಸಾಧ್ಯ. ಪ್ರದರ್ಶನಗಳಿಂದ ಲಾಭವನ್ನು ಅಪೇಕ್ಷಿಸದ ಸಂಘ/ಸಂಸ್ಥೆಗಳು ಈ ಬಗೆಯಲ್ಲಿ ಹೆಚ್ಚು ಕಾರ್ಯಪ್ರವೃತ್ತರಾಗಬೇಕಿದೆ. ಉದಾಹರಣೆಗೆ ಯಕ್ಷಗಾನ ಅಕಾಡಮಿಯಂತಹ ಸಂಸ್ಥೆಗಳು ವಾರ್ಷಿಕವಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತವೆ. ಇಲ್ಲಿ ಹೊಸ ಪ್ರಸಂಗಳಿಗೆ/ಬಳಕೆಯಲ್ಲಿ ಇಲ್ಲದ ಪ್ರಸಂಗಗಳಿಗೆ ಮಾತ್ರ ಅವಕಾಶವನ್ನು ಕಲ್ಪಿಸಬಹುದು. ಇದರಿಂದ ಒಂದಷ್ಟು ಹೊಸ ಪ್ರಸಂಗಗಳು ಪ್ರಯೋಗಕ್ಕೆ ಒಳಪಟ್ಟು, ಹೊಸತನವನ್ನು ನೀಡುವುದಕ್ಕೆ ಸಾಧ್ಯವಾಗುತ್ತದೆ.

ಪ್ರಯೋಗಗಳು ಯಾವಾಗಲೂ ಯಶಸ್ವಿಯಾಗಲೇಬೇಕೆಂಬ ಧೋರಣೆ ಸಲ್ಲ. ಕಲಾವಿದನಿಗೆ ಪ್ರಯೋಗಗಳು ರಂಗಭೂಮಿಯ ಒಳಮರ್ಮವನ್ನು ತಿಳಿಸುತ್ತವೆ. ಹೊಸತನನ್ನು ಕಲಿಸುತ್ತವೆ. ಸೃಜನಶೀಲತೆಯೇ ಕಲೆಯ ಜೀವಾಳ. ಅದನ್ನು ಬಿಟ್ಟರೆ ಕಲೆ ಉಳಿಯುವುದಿಲ್ಲ. ಹೀಗಾಗಿ ಕಲಾವಿದ ತನ್ನ ವ್ಯಾಪ್ತಿಯನ್ನು, ಬೆಳವಣಿಗೆಯನ್ನು ಹೊಂದುವುದಕ್ಕೆ ಬಯಸುವುದಾದರೆ ಹೊಸ ಪ್ರಯೋಗಗಳು ದೊಡ್ಡ ಅವಕಾಶವಾಗಿ ಕಾಣಿಸುತ್ತವೆ. ಈ ನಿಟ್ಟಿನಲ್ಲಿ ಪ್ರಯೋಗಶೀಲತೆಯನ್ನು ಅಳವಡಿಸಿಕೊಳ್ಳುವುದಕ್ಕೆ ಕಲಾವಿದರು/ಪ್ರೇಕ್ಷಕರು ಮಾನಸಿಕವಾಗಿ ಸಿದ್ಧರಿರಬೇಕು.

ಕೆಲವೊಮ್ಮೆ ಒಂದು ರಾತ್ರಿಯ ಪ್ರದರ್ಶನಕ್ಕೆ ಒಂದೇ ಪ್ರಸಂಗದ ೩ ಪ್ರಯೋಗಗಳನ್ನು ನೋಡುತ್ತೇವೆ. ಉದಾ: ಅಭಿಮನ್ಯು-ಅಭಿಮನ್ಯು-ಅಭಿಮನ್ಯು, ಕಾರ್ತವೀರ್ಯ-ಕಾರ್ತವೀರ್ಯ-ಕಾರ್ತವೀರ್ಯ ಇತ್ಯಾದಿಗಳು. ಇದರ ಬದಲು ೩ ಬೇರೆ ಬೇರೆ ಕವಿಗಳ ಕೃತಿಯನ್ನು ರಂಗದಲ್ಲಿ ಪ್ರಯೋಗಿಸಬಹುದು (ಬಹುತೇಕ ರಾಮಾಯಣ ಮತ್ತು

ಮಹಾಭಾರತ ಪ್ರಸಂಗಳಲ್ಲಿ ಒಂದಕ್ಕಿಂತ ಹೆಚ್ಚು ಕವಿಗಳ ಕೃತಿಗಳಿವೆ). ಇದರಿಂದ ರಂಗಕೃತಿಯಲ್ಲಿ ಬದಲಾವಣೆ ಕಂಡು ಪ್ರೇಕ್ಷಕನಿಗೆ ಉಂಟಾಗುವ ಏಕಾತನತೆಯನ್ನ ಹೊಗಲಾಡಿಸುವುದಕ್ಕೆ ಸಾದ್ಯ ಮತ್ತು ಹೊಸ ಆಯಾಮದಲ್ಲಿ ಪ್ರಸಂಗವನ್ನು ಪ್ರದರ್ಶಿಸುವುದಕ್ಕೆ ಸಾಧ್ಯವಾಗಬಹುದು


ಬಹುತೇಕ ಆಡುವ ಪ್ರಸಂಗಗಳಲ್ಲಿ ಸಿದ್ಧ ಮಾದರಿಯ ತಂತ್ರಗಳನ್ನೇ ಅಳವಡಿಸಿಕೊಂಡಿರುವುದರಿಂದ ಹೊಸತನವಿಲ್ಲದೆ ಪ್ರೇಕ್ಷಕ ಪ್ರದರ್ಶನಗಳಿಂದ ದೂರವಾಗುತ್ತಿರುವುದನ್ನು ಕಾಣಬಹುದು. ಕಲೆಯ ಬೆಳವಣಿಗೆ ದೃಷ್ಟಿಯಿಂದ ಹೊಸ ಪೌರಾಣಿಕ ಪ್ರಸಂಗಗಳ ಪ್ರಯೋಗವು ಅನಿವಾರ್ಯವೆನಿಸುತ್ತದೆ. ಆಧುನಿಕತೆ ಬೆಳದಂತೆ ಉಳಿದ ರಂಗಕಲೆಯ ಜೊತೆಗೆ ಸಂವಾದಿಯಾಗಿ ನಿಲ್ಲಬೇಕಿದ್ದರೆ ಪ್ರಯೋಗಗಳು ಕೂಡ ಬೇಕು. ಜೊತೆಗೆ ಹೆಚ್ಚು ಹೆಚ್ಚು ಹೊಸ ಪ್ರಸಂಗ ಪೌರಾಣಿಕ ಪ್ರಸಂಗಗಳ ಪ್ರಯೋಗವನ್ನು ಮಾಡುವುದರಿಂದ, ಯಕ್ಷಗಾನದ ಮೂಲ ಅಂತಃಸತ್ವವಾದ ಪೌರಾಣಿಕ ಆಶಯಗಳನ್ನು ಜನರಿಗೆ ತಿಳಿಸುವುದಕ್ಕೆ ಸಾಧ್ಯವಿದೆ. ಈ ನಿಟ್ಟಿನಲ್ಲಿ ನಮ್ಮ ಪ್ರಯತ್ನ ಪ್ರಯೋಗಶೀಲವಾಗಿರಲಿ.

**ಲೇಖಕರು –ರವಿ ಮಡೋಡಿ, ಬೆಂಗಳೂರು**

## ಅಗಲಿದ ನಡುತಿಟ್ಟಿನ ಅಪ್ರತಿಮ ಪುರುಷ ವೇಷಧಾರಿ, ಸೀತಾನದಿ ಗಣಪಯ್ಯ ಶೆಟ್ಟಿ ಪ್ರಶಸ್ತಿ ಪುರಸ್ಕೃತ ಮಜ್ಜಿಗೆಬೈಲು ಆನಂದ ಶೆಟ್ಟಿ



**ಮಜ್ಜಿಗೆಬೈಲು ಆನಂದ ಶೆಟ್ಟರು**



**ಪ್ರೋ.ಎಸ್.ವಿ.ಉದಯ ಕುಮಾರ ಶೆಟ್ಟಿ**

ನಡು ಬಡಗುತಿಟ್ಟಿನ ಅಪ್ರತಿಮ ಪುರುಷ ವೇಷಧಾರಿ ಮಜ್ಜಿಗೆಬೈಲು ಆನಂದ ಶೆಟ್ಟರು ಇಹಲೋಕದ ಯಾತ್ರೆ ಮುಗಿಸಿದ್ದಾರೆ. ಅವರಿಗೆ ೭೮ ವರ್ಷ ವಯಸ್ಸಾಗಿತ್ತು. ದೀರ್ಘ ಕಾಲ ಮಂದಾರ್ತಿ ಮೇಳದಲ್ಲಿ ಸೇವೆ ಸಲ್ಲಿಸಿದ್ದ ಅವರು ತನ್ನ ೭೨ನೇ ವಯಸ್ಸಿನಲ್ಲಿ ಮಂದಾರ್ತಿ ಮೇಳದಲ್ಲಿ ಎರಡನೇ ವೇಷಧಾರಿಯಾಗಿ ದುಡಿದು ನಿವೃತ್ತಿ ಹೊಂದಿದ್ದರು.

ಲಂಕಾದಹನದ ಸುಂದರರಾವಣನ ವೇಷದಿಂದ ಬಯಲಾಟ ಪ್ರೇಕ್ಷಕರ ಮನೆಮಾತಾದ ಹಿರಿಯಕಲಾವಿದ ದಿ.ಮಜ್ಜಿಗೆಬೈಲು ಚಂದಯ್ಯ ಶೆಟ್ಟಿ ಮತ್ತು ಚಂದಮ್ಮ ಶೆಡ್ತಿಯವರ ಪುತ್ರರಾದ ಆನಂದ ಶೆಟ್ಟರು ಪಾರಂಪರಿಕ ವರ್ಚಸ್ಸಿನ ಪ್ರಾತಿನಿಧಿಕರಾಗಿ ಗುರುತಿಸಿಕೊಂಡವರು. ಸುಮಾರು ೭೨ ವರ್ಷದ ಈ ಹಿರಿಯ ಕಲಾವಿದರು ನಡುಬಡಗಿನ ವೇಷ ವೈವಿಧ್ಯದಲ್ಲಿ ತನ್ನದೇ ಛಾಪು ಮೂಡಿಸಿ ಸಮಕಾಲಿನ ರಂಗಭೂಮಿಗೆ ಒಗ್ಗಿಕೊಳ್ಳದೆ ಸನಾತನ ಕಲಾಸಾರವನ್ನೇ ಗಂಭೀರವಾಗಿ ಹೀರಿಕೊಂಡ ಶಿಷ್ಟ ಕಲಾವಿದರು. ಡೇರೆಮೇಳಗಳ ಹೊಸ ಪ್ರಸಂಗಗಳು ಯಕ್ಷಗಾನಕ್ಕೇ ಲಗ್ಗೆ ಇಟ್ಟಾಗಲೂ ತನ್ನತನದೊಂದಿಗೆ ರಾಜಿ ಮಾಡಿಕೊಳ್ಳದೇ ಮುಂದುವರಿದವರು. ಗತ್ತು ಗಾಂಭೀರ್ಯದ ನಡೆ ಪ್ರೌಢ ಸಾಹಿತ್ಯ, ಯಕ್ಷಗಾನೀಯ ಸೊಗಡು ಮೈವೆತ್ತ ಅವರ ವೇಷಗಳಲ್ಲಿ ನಡುತಿಟ್ಟಿನ ಎರಡು ಶೈಲಿಗಳನ್ನು ಗುರುತಿಸಬಹುದಾಗಿದೆ. ಕರ್ಣ, ಜಾಂಬವ ಭೀಷ್ಮ, ವಿಭೀಷಣ ಮುಂತಾದ ಎರಡನೇ ವೇಷಗಳಲ್ಲಿ ಹಾರಾಡಿ ಶೈಲಿಯ ಜಾಪುಕಣ್ಣು ಹೊರಳಿಕೆ ಸುಧನ್ವ, ಅರ್ಜುನ, ತಾಮ್ರಧ್ವಜ, ಪುಷ್ಕಳ ದೇವ್ವ್ರತ ಮುಂತಾದ ಪುರುಷ ವೇಷಗಳಲ್ಲಿ ಮಟಪಾಡಿ ಶೈಲಿಯ ಕಿರು ಹೆಜ್ಜೆಯನ್ನು ಗುರುತಿಸಬಹುದಾಗಿದೆ.ಬಹುಕಾಲ ಮೊಳಹಳ್ಳಿ ಹೆರಿಯ ನಾಯ್ಕರೊಂದಿಗಿನ ಅವರ ಪುರುಷವೇಷ ಶ್ರೀ ಮಂದಾರ್ತಿ ಮೇಳದ ರಂಗಸ್ಥಳವನ್ನು ತುಂಬಿಸಿತ್ತು.

ಕೇವಲ ಐದನೇ ತರಗತಿ ವಿದ್ಯಾಭ್ಯಾಸ ಪಡೆದ ಇವರಿಗೆ ತಂದೆಯೇಯಕ್ಷಗಾನದ ಗುರು. ಆ ಕಾಲದಲ್ಲಿತಂದೆಗೆ ಹೆಸರುತಂದ ಬಂಡಿಭೀಮ, ಸುಂದರರಾವಣ, ವಲಲ ಮುಂತಾದ ಪಾತ್ರಗಳು ಇವರನ್ನು ಯಕ್ಷಗಾನದತ್ತ ಸೆಳೆಯಿತು. ಆನೆಗುಡ್ಡೆ ವಿನಾಯಕ ದೇವಸ್ಥಾನದಲ್ಲಿ ಗೆಜ್ಜೆ ಕಟ್ಟಿದ ಇವರು ತಂದೆಯೊಂದಿಗೆ ಆಗಿನ ಕೊಡವೂರು ಮೇಳಕ್ಕೆ ಸೇರಿದರು. ಬಳಿಕ ಪೆರ್ಡೂರು ಗೋಳಿಗರಡಿ ಅಮೃತೇಶ್ವರಿ, ಸಾಲಿಗ್ರಾಮ ಮಾರಣಕಟ್ಟೆ ಮೇಳ ಸೇರಿ ದೀರ್ಘಕಾಲ ಹೆಗ್ಗುಂಜೆ ಭೋಜರಾಜ ಹೆಗ್ಡೆಯವರ ಮಂದಾರ್ತಿ ಮೇಳದಲ್ಲಿ ಸೇವೆ ಸಲ್ಲಿಸಿದ್ದರು. ಜಾನುವಾರುಕಟ್ಟೆ ಭಾಗವತರು, ಮರಿಯಪ್ಪಾಚಾರ್, ಉಡುಪಿ ಬಸವ, ಕೋಡಿ ಶಂಕರ ಗಾಣಿಗ, ಮೊಳಹಳ್ಳಿ ಹೆರಿಯ ಹೆರಂಜಾಲು ಸುಬ್ಬಣ್ಣ



ಮತ್ಯಾಡಿ ನರಸಿಂಹ ಶೆಟ್ಟಿಯವರ ಒಡನಾಟದ ಮಂದಾರ್ತಿ ಮೇಳದ ತಿರುಗಾಟ ಶೆಟ್ಟರ ಯಕ್ಷಗಾನ ಬದುಕಿನ ಸುವರ್ಣಯುಗ. ಪೆರ್ಡೂರು ಮೇಳದಲ್ಲಿ ನಗರ ಜಗನ್ನಾಥ ಶೆಟ್ಟಿ ಮತ್ತು ಐರೋಡಿ ಗೋವಿಂದಪ್ಪನವರೊಂದಿಗಿನ ಪೌರಾಣಿಕ ಪ್ರಸಂಗದ ಇವರ ವೇಷಗಳು ಜನಮನ್ನಣೆ ಪಡೆದಿದ್ದವು. ಬಯಲಾಟದ ಜೋಡಾಟದಲ್ಲಿಇವರನ್ನು ಮಂಡಿ ಹಾಕುವುದರಲ್ಲಿ ಸೋಲಿಸುವವರೇ ವಿರಳವಾಗಿತ್ತು.ಸುಮಾರು ೫೦ ವರ್ಷ ಬಡಗುತಿಟ್ಟಿನ ರಂಗಸ್ಥಳವನ್ನು ಶ್ರೀಮಂತಗೊಳಿಸಿದ ಶೆಟ್ಟರು ಅರ್ಜುನ, ಪುಷ್ಕಳ, ಸುಧನ್ವ ಮುಂತಾದ ಪುರುಷ ವೇಷಗಳಿಗೆ ಜೀವತುಂಬಿ ತಿರುಗಾಟದ ಕೊನೆಯಲ್ಲಿ ಹಲವು ವರ್ಷ ಮಂದಾರ್ತಿ ಮೇಳದಲ್ಲಿ ಎರಡನೇ ವೇಷಧಾರಿಯಾಗಿ ಭಡ್ತಿ ಹೊಂದಿ ಕರ್ಣ, ಜಾಂಬವ, ಮಾರ್ತಾಂಡತೇಜ ಮುಂತಾದ ಪ್ರಧಾನ ವೇಷಗಳಿಗೆ ನ್ಯಾಯ ಒದಗಿಸಿದ ಶೆಟ್ಟರು ಅನಾರೋಗ್ಯದಿಂದ ಮಂದಾರ್ತಿ ಮೇಳದಿಂದ ನಿವೃತ್ತಿ ಪಡೆದಿದ್ದರು. ಕೆಲವು ವರ್ಷ ಸಾಲಿಗ್ರಾಮ ಮೇಳದಲ್ಲೂ ಸೇವೆ ಸಲ್ಲಿಸಿದ್ದರು.

ಸುಮಾರು ೪೦ ವರ್ಷದ ಹಿಂದಿಯೇ ಇವರ ವೇಷ ನೋಡಿದ ಮಸ್ಕತ್ತ್ ನ ರಂಜಿತ್ ಗುಪ್ತ ಎನ್ನುವವರು ಇವರನ್ನು ಅಲ್ಲಿಗೆ ಕರೆಸಿ ಸನ್ಮಾನಿಸಿದ್ದರು. ತಿರುಗಾಟದ ಸುಮಾರು ೨೫ ವರ್ಷ ಮಂದಾರ್ತಿ ಮೇಳವೊಂದರಲ್ಲೇ ಕಳೆದ ಇವರಿಗೆ ಶ್ರೀ ಕ್ಷೇತ್ರದ ಹಾರಾಡಿ ರಾಮಗಾಣಿಗ ಪ್ರಶಸ್ತಿ, ಉಡುಪಿ ಯಕ್ಷಗಾನ ಕಲಾರಂಗ ಪ್ರಶಸ್ತಿ, ಹಾರಾಡಿ ಕುಷ್ಟ ಗಾಣಿಗ ,ಮಟಪಾಡಿ ವೀರಭದ್ರ ನಾಯಕ್ ಸಂಸ್ಮರಣಾ ಪ್ರಶಸ್ತಿ, ಗೋಳಿಗರಡಿಯ ಚಂದುಪೂಜಾರಿ ಸಂಸ್ಮರಣಾ ಪ್ರಶಸ್ತಿ, ಪ್ರತಿಷ್ಠಿತ ಸೀತಾನದಿ ಗಣಪಯ್ಯ ಶೆಟ್ಟಿ ಪ್ರಶಸ್ತಿ, ಉಡುಪಿ ಯಕ್ಷಗಾನ ಕಲಾಕ್ಷೇತ್ರ ಪ್ರಶಸ್ತಿ ಸಹಿತ ಅನೇಕ ಸನ್ಮಾನಗಳು ಸಂದಿವೆ. ಮಂದಾರ್ತಿ ಮೇಳದಲ್ಲಿ ಕೊನೆಯವರೆಗೂ ಸೇವೆ ಸಲ್ಲಿಸಿ ಸಾರ್ಥಕತೆ ಕಂಡುಕೊಂಡಿದ್ದರು.

**ಲೇಖಕರು – ಪ್ರೋ.ಎಸ್.ವಿ.ಉದಯಕುಮಾರ ಶೆಟ್ಟಿ ಮಣಿಪಾಲ**

**ವಿಶೇಷ ವ್ಯಕ್ತಿ:** ಯಕ್ಷಗಾನ ಗೊಂಬೆ ತಯಾರಿಕೆಯಲ್ಲಿ ರಾಷ್ಟ ಮಟ್ಟದಲ್ಲಿ ಹೆಸರು ಮಾಡಿರೋ ಕಲಾವಿದ ***ಕೃಷ್ಣ ಮೂರ್ತಿ ಉಪ್ಪೂರ.*** ಇವರು ಬಡಗು ತಿಟ್ಟಿನ ಪ್ರಸಿದ್ಧ ಭಾಗವತ ***ಮಾರ್ವಿ ನಾರಣಪ್ಪ ಉಪ್ಪೂರ***ರ ಪುತ್ರರು ಹಾಗೂ ಬಾಲ್ಯದಿಂದಲೇ ಯಕ್ಷಗಾನ ಹಾಗೂ ಚಿತ್ರಕಲೆಯ ಬಗ್ಗೆ ಆಸಕ್ತಿ ತಳೆದಿದ್ದರು. ಇವರು ಮೈಸೂರಿನಲ್ಲಿ ಚಿತ್ರಕಲೆ ಹಾಗೂ ಶಿಲ್ಪಕಲೆಯ ಬಗ್ಗೆ ತರಬೇತಿ ಪಡೆದಿದ್ದಾರೆ. ಉಪ್ಪೂರರು ಯಕ್ಷಗಾನದ ಕಪ್ಪು, ಕೆಂಪು, ಹಸಿರು ಕೇದಗೆ ಮುಂದಲೆ, ಮೈಂದ, ದ್ವಿವಿಧರಂತಹ ವಾನರಗಳ ಸಂಪ್ರದಾಯ ಮುಖವರ್ಣಿಕೆಯುಳ್ಳ ಕೇದಗೆ ಮುಂದಲೆ, ಕಪ್ಪು ಕೆಂಪು, ಹಸಿರು ಮುಂಡಾಸು ವೇಷಗಳು, ಗಂಧರ್ವ, ಕರ್ಣ ಪಾತ್ರದ ಮುಂಡಾಸುಗಳ ಗೊಂಬೆಗಳನ್ನು ತಯಾರಿಸುತ್ತಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಇವರ ಕೌಶಲದಿಂದ ಮೂಡಿ ಬರುವ ಸೂಕ್ಷ್ಮ ರೇಖೆಗಳ, ಮುಖವರ್ಣಿಕೆಯ ಬಣ್ಣದ ರಾಕ್ಷಸ ವೇಷದ ಗೊಂಬೆಗಳು ಅತ್ಯಾಕರ್ಷಕವಾಗಿದೆ.



ಸಾಯಿಸುಮಾ ಎಂ. ನಾವಡ

## ಧೀರ ಕಲೆಯೊಳಗೆ ಕೀರವಾಣಿಯರು – ೦೫

### ಯಕ್ಷಗಾನದಲ್ಲಿ ಮುನ್ನೆಲೆಗೆ ಬರಲಾಗದೇ ಉಳಿದ ಮಹಿಳಾ ಭಾಗವತರು – ಶ್ರೀಮತಿ ರತ್ನಾವತಿ ಶಿರಂತಡ್ಕ

ಎಪ್ಪತ್ತರ ದಶಕದಲ್ಲಿ ಮಹಿಳೆಯೋರ್ವಳು ಯಕ್ಷಗಾನ ನೋಡುವುದೇ ಕಷ್ಟ, ಅಂತಹದರಲ್ಲಿ ಭಾಗವತಿಕೆಯನ್ನು ಕಲಿತು ತನ್ನ ಮನೆಯವರ ಪ್ರೋತ್ಸಾಹ, ಸಹಕಾರಗಳಿದ್ದರೂ ಪತಿಯ ಉದ್ಯೋಗದಿಂದ ಊರೂರು ತಿರುಗಬೇಕಾಗಿ ಬಂದು, ಅವಕಾಶವಂಚಿತರಾದ ಮಹಿಳಾ ಭಾಗವತರು ಶ್ರೀಮತಿ ರತ್ನಾವತಿ ಶಿರಂತಡ್ಕ. ಹೀಗಿದ್ದರೂ ತಮ್ಮ ಕಲೆಯೊಲವನ್ನು ಉಳಿಸಿಕೊಂಡವರು ಅವಕಾಶ ಸಿಕ್ಕಾಗ ಅದನ್ನು ಬಳಸಿಕೊಂಡವರು, ಆ ಮುಖೇನ ಕಲೆಯನ್ನು ಬೆಳೆಸುವುದಕ್ಕೆ ಪ್ರಯತ್ನಿಸಿದವರು.

ಇವರು ಕಾಸರಗೋಡಿನ ಪಡ್ರೆ ಗ್ರಾಮದ ಶಿರಂತಡ್ಕದಲ್ಲಿ ಜನಿಸಿದವರು. ಇವರ ತಂದೆ ಶಿರಂತಡ್ಕ ನಾರಾಯಣ ಭಟ್ ಹಾಗೂ ತಾಯಿ ರೇಣುಕ ಅಮ್ಮ. ಇವರೀರ್ವರ ಮಗಳಾಗಿ ೧೯೪೮ ಸಪ್ಟೆಂಬರ್ ೨೩ ರಂದು ಇವರ ಜನನ. ಇವರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪೆರ್ಲದ ಶಾಲೆಯಲ್ಲಿಯೇ ಪೂರ್ಣಗೊಳಿಸಿದರು. ತಾವು ಹುಟ್ಟಿ, ಬೆಳೆದ ಪರಿಸರ ಯಕ್ಷಗಾನದ ಆಸಕ್ತರಿಂದಲೇ ಕೂಡಿದ್ದು, ಅಲ್ಲಿ ನಡೆಯುತ್ತಿದ್ದ ಯಕ್ಷಗಾನಗಳನ್ನು ಕಾಣುತ್ತಾ, ಮನದಲ್ಲೇ ಅದರ ಹಾಡುಗಳನ್ನು ಗುನುಗುನಿಸುತ್ತಾ ಬೆಳೆದವರು ರತ್ನಾವತಿಯವರು. ತಮ್ಮ ವಾತಾವರಣವೇ ಅವರಿಗೆ ಯಕ್ಷಗಾನದ ಆಸಕ್ತಿಗೆ ಪೂರಕವಾಯಿತೆಂದರೆ ಹೆಚ್ಚಲ್ಲ. ರತ್ನಾವತಿಯವರ ತಂದೆ ಶಿರಂತಡ್ಕ ನಾರಾಯಣ ಭಟ್ಟರು ಸ್ವತಃ ಭಾಗವತರು. ಅವರ ಭಾಗವತಿಕೆಯನ್ನು ಕೇಳುತ್ತಾ ತಾನೂ ಕಲಿಯಬೇಕೆಂಬ ಆಸಕ್ತಿಯನ್ನು ಬೆಳೆಸಿಕೊಂಡದ್ದನ್ನು ಅರ್ಥವಿಸಿಕೊಂಡ ನಾರಾಯಣ ಭಟ್ಟರು, ಮಗಳಿಗೆ ಭಾಗವತಿಕೆಯನ್ನು ಕಲಿಸುವ ಮನಮಾಡಿದರು. ಹಾಗಾಗಿ ಭಾಗವತಿಕೆಯ ಬಾಲಪಾಠ ತಮ್ಮ ಹದಿನಾಲ್ಕನೆಯ ವಯಸ್ಸಿಗೆ ರತ್ನಾವತಿಯವರಿಗಾಯಿತು.

"ತಮ್ಮ ಮಾವ, ಯಕ್ಷಗಾನ ಅರ್ಥಧಾರಿ ಪೆರ್ಲ ಕೃಷ್ಣಭಟ್ ಅವರ ಪ್ರೇರಣೆಯ ಮಾತುಗಳು ಭಾಗವತಿಕೆಯಲ್ಲಿ ಉತ್ಸಾಹವನ್ನು ತುಂಬಿದೆ ಎನ್ನುತ್ತಾರೆ" – ರತ್ನಾವತಿಯವರ ಈ ಮಾತುಗಳು ಡಾ.ನಾಗವೇಣಿ ಮಂಚಿಯವರ ಸಂಶೋಧನಾ ಪ್ರಬಂಧ 'ಯಕ್ಷಸ್ತ್ರೀ'ಯಲ್ಲಿ ಸಿಗುತ್ತವೆ. ಶಿರಂತಡ್ಕ ರತ್ನಾವತಿಯವರ ತಾಯಿ ತಂದೆಯೂ ಕೂಡ ಆ ಕಾಲದಲ್ಲಿದ್ದ ಪ್ರಸಿದ್ಧ ಅರ್ಥಧಾರಿಗಳಾದ ಪಡ್ರೆ ಶ್ರೀಪತಿ ಶಾಸ್ತ್ರಿಗಳು. ಒಂದರ್ಥದಲ್ಲಿ ಇವರಿಗೆ ಯಕ್ಷಗಾನಾಸಕ್ತಿ ರಕ್ತಗತವಾಗಿಯೇ ಬಂದಿತೆನ್ನಬಹುದು. ಸುಮಾರು ಎಂಟು ವರ್ಷಗಳ ಕಾಲ ತಮ್ಮ ಮದುವೆಯಾಗುವವರೆಗೆ ತಂದೆಯವರಲ್ಲಿ ಭಾಗವತಿಯ ಅಭ್ಯಾಸ ಮಾಡುತ್ತಾ ಭಾಗವತಿಯನ್ನು ಮಾಡುತ್ತಿದ್ದರು. ಇವರು ಅನೇಕ ಯಕ್ಷಗಾನ ಬಯಲಾಟಗಳಲ್ಲಿ, ಸುಮಾರು ಐವತ್ತಕ್ಕಿಂತಲೂ ಹೆಚ್ಚು ತಾಳಮದ್ದಳೆ ಕೂಟಗಳಲ್ಲಿ ಭಾಗವತಿಕೆಯನ್ನು ಮಾಡಿದವರು.

೧೯೭೦ರಲ್ಲಿ ಕಾಸರಗೋಡಿನ ಕೃಷ್ಣಭಟ್ ಎಂಬವರನ್ನು ಮದುವೆಯಾಗುತ್ತಾರೆ. ಆ ಬಳಿಕ ಯಕ್ಷಗಾನದಲ್ಲಿ ಕಾಣಿಸಿಕೊಳ್ಳುವುದು ಅವರಿಗೆ ಕಷ್ಟ ಸಾಧ್ಯವಾಯಿತು. ಕಾರಣವೆಂದರೆ, ಅವರ ಪತಿ ಕೃಷ್ಣಭಟ್ಟರು ಭಾರತೀಯ ಸೇನೆಯಲ್ಲಿ ಉದ್ಯೋಗದಲ್ಲಿದ್ದವರು. ೧೯೬೩ರಿಂದ ೧೯೭೮ ರವರೆಗೆ ಜಮ್ಮು–ಕಾಶ್ಮೀರ ಭಾಗದಲ್ಲಿ ಉದ್ಯೋಗದಲ್ಲಿದ್ದವರು. ೧೯೮೨ ರಿಂದ ೧೯೭ ರವರೆಗೆ ಕೇರಳದ ಆರಕ್ಷಕ ವಿಭಾಗದಲ್ಲಿ ಸೇವೆ ಮಾಡಿ ನಿವೃತ್ತಿ ಹೊಂದಿದವರು. ಇವರು ೧೯೭೭–೭೮ ರಲ್ಲಿ ಕಾಸರಗೋಡಿನ ನಿವಾಸಿಗಳಾದ ಬಳಿಕ ರತ್ನಾವತಿಯವರಿಗೆ ಯಕ್ಷಗಾನ ಭಾಗವತಿಕೆಯ ಕೆಲವೊಂದು ಅವಕಾಶಗಳು ಮತ್ತೆ ಬರಲಾರಂಭಿಸಿದವು.

ಇವರು ಅನೇಕ ಶಾಲೆಯ ಕಾರ್ಯಕ್ರಮಗಳಲ್ಲಿ, ಸಂಘದ ಕಾರ್ಯಕ್ರಮಗಳಲ್ಲಿ, ಕರಾಡ ಬ್ರಾಹ್ಮಣರ ಕಾರ್ಯಕ್ರಮಗಳಲ್ಲಿ ಹಾಡುವ ಅವಕಾಶವನ್ನು ಪಡೆದುಕೊಂಡಿದ್ದಾರೆ. ತಮ್ಮ ಅಜ್ಜ ಶ್ರೀಪತಿ ಶಾಸ್ತ್ರಿಗಳು ಬರೆದ ''ಪ್ರಹ್ಲಾದಚರಿತ್ರೆ'ಯನ್ನು ಬಹಳ ಸೊಸಗಾಗಿ ಹಾಡಬಲ್ಲರಂತೆ. ಕರಾಡ ಭಾಷೆಯ ಶೋಭಾನೆ ಹಾಡುಗಳನ್ನು ಕೂಡ ಹಾಡುವುದರಲ್ಲಿ ನಿಸ್ಸೀಮರಂತೆ. ತಮ್ಮ ಪತಿಯ ಪ್ರೋತ್ಸಾಹವಿದ್ದರೂ ಕಾರಣಾಂತರಗಳಿಂದ ಭಾಗವತಿಕೆಯಿಂದ ದೂರ ಉಳಿದರೂ, ಬಳಿಕ ಮತ್ತೆ ಊರಿಗೆ ಬಂದ ಬಳಿಕ ಅವಕಾಶಗಳನ್ನು ಪಡೆದುಕೊಂಡು ಬೆಳೆಯುವುದಕ್ಕೆ ಪ್ರಯತ್ನಿಸಿದರು. ಇಷ್ಟು ಮಾತ್ರವಲ್ಲದೇ ಕರಾಡ ಬ್ರಾಹ್ಮಣರ ಮಹಿಳಾ ತಂಡವನ್ನು ಕಟ್ಟಿ, ಯಕ್ಷಗಾನ ಪ್ರದರ್ಶನ ನೀಡಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

"ಕಾಸರಗೋಡಿನಲ್ಲಿ ಈಗಾಗಲೇ ಹೆಸರಿಸಿದ ಭಾಗವತರುಗಳಾದ ನರ್ಮದಾ, ಲೀಲಾವತಿ ಬೈಪಾಡಿತ್ತಾಯ, ದುರ್ಗಾಪರಮೇಶ್ವರಿಯವರ ಸಾಲಿನಲ್ಲಿ ರತ್ನಾವತಿಯವರ ಹೆಸರನ್ನು ಸೇರಿಸಬೇಕಾಗಿದೆ"–ಎಂಬ ಮಾತು 'ತೆಂಕನಾಡ ಯಕ್ಷಗಾನ' ಕೃತಿಯಲ್ಲಿ' ಕಾಸರಗೋಡಿನ ಮಹಿಳಾ ಭಾಗವತರು'ಎಂಬ ಭಾಗದಲ್ಲಿ ಬರುತ್ತದೆ. ಇಂದಿನಂತೆ ಮಾಧ್ಯಮಗಳ ಭರಾಟೆ ಜೋರಾಗಿರುತ್ತಿದ್ದರೆ ಇವರಂತಹ ಕಲಾವಿದರ ಹಾಡುಗಳನ್ನು ಕೇಳಿ ಆನಂದಿಸಬಹುದಿತ್ತೇನೋ.

**ಲೇಖಕರು – ಸಾಯಿಸುಮಾ ಎಂ. ನಾವಡ, ಕಾರಿಂಜ**

## ಪೂರ್ವರಂಗವೇ ನಿಜವಾದ ಬೆಳಕಿನ ಸೇವೆ



ದಕ್ಷಿಣದ ಕಾಸರಗೋಡಿನಿಂದ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯನ್ನು ಹಾದು ಉತ್ತರ ಕನ್ನಡ ಜಿಲ್ಲೆಯ ತನಕ ಆವರಿಸಿದ ಪಡುಗಡಲ ತೀರ ಯಕ್ಷಗಾನದ ಆಡೊಂಬಲ. ಇದರ ಪ್ರಭಾವಕ್ಕೆ ಒಳಗಾದ ಇತರ ಪ್ರದೇಶಗಳೆಂದರೆ ಪಶ್ಚಿಮ ಘಟ್ಟದ ಮಗ್ಗುಲಲ್ಲಿರುವ ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗೆ ಸೇರಿದ ನಗರ, ಹೊಸನಗರ ಮತ್ತು ಶೃಂಗೇರಿ. ಇಂಥ ಒಂದು ಜಿಯಾಗ್ರಫಿಕಲ್ ಇಂಡಿಕೇಶನ್ ಇರುವ ಕಲೆ ಯಕ್ಷಗಾನ. ಇಲ್ಲಿ ಯಕ್ಷಗಾನ ಆರಾಧನಾ ಕಲೆಯಾಗಿ ಉಳಿದು ಬೆಳೆದು ಬಂದಿದೆ. ಈ ಭಾಗದ ಹೆಸರಾಂಥ ದೇವಸ್ಥಾನಗಳ ಆಶ್ರಯ ಹಾಗೂ ಆ ದೇವರುಗಳ ಹೆಸರಿನ ಯಕ್ಷಗಾನ ಪ್ರದರ್ಶನಾ ತಂಡ ಅಥವಾ ವಾಡಿಕೆಯ ಭಾಷೆಯಲ್ಲಿ ಮೇಳಗಳು ಯಕ್ಷಗಾನದ ತೇರನ್ನು ಶತಮಾನಗಳಿಂದ ಎಳೆದು ತರಲು ಶಕ್ತವಾಗಿವೆ. ಈ ಮೇಳಗಳ ಅಸ್ತಿತ್ವಕ್ಕೆ ಮುಖ್ಯವಾಗಿ ಹರಕೆ ಆಟಗಳೇ ಬೆನ್ನೆಲುಬು. ಕರಾವಳಿಯ ಮಂದಿ ತಮ್ಮ ಜೀವನದ ಸಂಕಷ್ಟ ಪರಿಹಾರಕ್ಕೆ ದೇವರ ಹೆಸರಿನ ಮೇಳಗಳ ಯಕ್ಷಗಾನ ಪ್ರದರ್ಶನ ಆಯೋಜಿಸುವ ಅಥವಾ ಆಟ ಆಡಿಸುವ ಸಂಕಲ್ಪ ಮಾಡುವುದು ಅಥವಾ ಹರಸಿಕೊಳ್ಳುವುದು ವಾಡಿಕೆ. ಅದೇ ಹರಕೆ ಆಟ ಅಥವಾ ಬೆಳಕಿನ ಸೇವೆ. ಹರಕೆದಾರ ಕುಟುಂಬಗಳ ನಂಬಿಕೆಯ ದೃಷ್ಟಿಯಲ್ಲಿ ಪೂರ್ವರಂಗ ಮಹತ್ವದ್ದಾಗಿದೆ. ಮೇಳದವರು ಆಟ ಆಡಿಸುವವರ ಮನೆಗೆ ಬಂದು "ತಾಳಮದ್ದಳೆ ಹಾಕು"ವುದರಿಂದ ತೊಡಗಿ ಆಟ ಮುಗಿದು "ಕರದೊಳು ಪರಶು" ಪದದೊಂದಿಗೆ ಕೊನೆಗೊಳಿಸುವವರೆಗಿನ ಎಲ್ಲವೂ ಹರಕೆದಾರರು ನಂಬಿದ ದೇವರಿಗೆ ಅರ್ಪಿಸುವ ಹರಕೆಯಾಗಿದೆ. ಕೃಷಿ ಮೂಲದವರೇ ಹೆಚ್ಚಾಗಿರುವ ಹರಕೆದಾರರು ಷಣ್ಮತ ಆರಾಧಕರು. ಗಣಪತಿ, ವಿಷ್ಣು, ಶಿವ, ದುರ್ಗೆ, ಸ್ಕಂದ ಹಾಗೂ ಸೂರ್ಯ ಹೀಗೆ ಆರು ದೇವತೆಗಳ ಗಾನ ನಾಟ್ಯ ಹೊಗಳಿಕೆ



ಪೂರ್ವರಂಗದಲ್ಲಿ ಒಳಗೊಂಡಿದೆ. ಮೊದಲಾಗಿ ಗಣಪತಿ ಅರ್ಚನೆ, ಬಾಲಗೋಪಾಲ (ಕೃಷ್ಣ ಬಲರಾಮ)ರ ಮೂಲಕ ವಿಷ್ಣು ಅರ್ಚನೆ, ಷಣ್ಮುಖ ಸುಬ್ಬರಾಯ ನಾಟ್ಯದಿಂದ ಸುಬ್ರಮಣ್ಯ ಮತ್ತು ನಾಗದೇವರ ಅಭೇದ ಅರ್ಚನೆ, ಅರ್ಧನಾರೀಶ್ವರ ಮೂಲಕ ಶಿವ ಮತ್ತು ದೇವಿಯರ ಪೂಜೆ ನಡುವೆ ಶ್ಲೋಕ ಮತ್ತು ವಚನಗಳ ಮೂಲಕ ಸೂರ್ಯನ ಅರ್ಚನೆ ನಡೆಯುತ್ತವೆ. ಇದು ಭಕ್ತಿ ಮಾರ್ಗ. ಈ ಮಾರ್ಗವೇ ಕೃಷಿಕರಿಗೆ ಪರಂಪರೆಯಾಗಿ ಬಂದಿರುವುದು ಎಂಬ ಉಲ್ಲೇಖ ಯಕ್ಷಗಾನ ಸಂಶೋಧಕ, ವಿದ್ವಾಂಸ ಡಾ। ಕೆ.ಎಂ. ರಾಘವ ನಂಬಿಯಾರ್ ಇತ್ತೀಚೆಗೆ ಯಕ್ಷಗಾನ ಜಾಗೃತಿ ವೇದಿಕೆ ಸಾಲಿಗ್ರಾಮ ಪ್ರಕಟಿಸಿದ ಯಕ್ಷಗಾನ ವೇಷ ಕ್ರಮ-ಬಡಗು (ನಡು) ತಿಟ್ಟು" ಪುಸ್ತಕಕ್ಕೆ ನೀಡಿದ ಮುನ್ನುಡಿಯಲ್ಲಿದೆ.

ದುರದೃಷ್ಟವೇನೆಂದರೆ ಈ ಪೂರ್ವರಂಗ ಈಗ ಉಪ್ಪವಾಗುತ್ತಿದೆ. ನಿತ್ಯವೇಷ ಎನ್ನುವ ಈ ಭಾಗದಲ್ಲಿ ನಡೆಯುವ ನೃತ್ಯಾಭಿನಯಗಳು ಅಭ್ಯಾಸಿಗಳ ಕಾಲಹರಣವೆಂದು ವ್ಯಾಖ್ಯಾನಿಸಿ ಒಂದೊಂದನ್ನೆ ಮೊಟಕುಗೊಳಿಸುತ್ತಾ ಬರಲಾಗಿದೆ. ಇದು ರಂಗಕ್ಕಾದ ದೊಡ್ಡ ಹೊಡೆತ. ಈ ಕುರಿತ ಗಂಭೀರವಾಗಿ ಚಿಂತಿಸಿದ ಯಕ್ಷಗಾನ ಜಾಗೃತಿ ವೇದಿಕೆ ಸಾಲಿಗ್ರಾಮ ಪೂರ್ವರಂಗಕ್ಕೆ ಒತ್ತುಕೊಡುವ ದಿಸೆಯಲ್ಲಿ ಪೂರ್ವರಂಗದಿಂದ ಕಣ್ಮರೆಯಾಗುತ್ತಿರುವ ವೇಷಗಳ ಪುನರಚನೆ ಮಾಡಿದೆ. ಉದಾ: ಅರ್ಧನಾರೀಶ್ವರ ಹಾಗೂ ಷಣ್ಮುಖ ಸುಬ್ಬರಾಯ, ಅರ್ಧನಾರೀಶ್ವರ ವೇಷದ ಹಾಡುಗಾರಿಕೆ, ಮದ್ದಳೆ ವಾದನ ಮತ್ತು ನಾಟ್ಯ ಸಂಯೋಜನೆ ಈಗಾಗಲೇ ಹಿರಿಯಡ್ಕ ಗೋಪಾಲರಾಯರು ರೂಪಿಸಿರುತ್ತಾರೆ. ಇದೀಗ ಷಣ್ಮುಖ ಸುಬ್ಬರಾಯ ವೇಷದ ಗಾನ ನಾಟ್ಯ ಸಂಯೋಜನೆಯನ್ನು ಮಾಡಿ ದಾಖಲಿಸುವ ಉದ್ದೇಶ ವೇದಿಕೆ ಹೊಂದಿದೆ. ಸದ್ಯ ವೇದಿಕೆ ಪುನರಚಿಸಿದ ಷಣ್ಮುಖ ಸುಬ್ಬರಾಯ ವೇಷ ಯಕ್ಷಗಾನ ವೇಷ ಕ್ರಮ" ಬಡಗು(ನಡು) ತಿಟ್ಟು ಪುಸ್ತಕದಲ್ಲಿ ದಾಖಲಾಗಿದೆ.


ಯಕ್ಷಗಾನದಲ್ಲಿ ಪೂರ್ವರಂಗದ ಪುನರುತ್ಥಾನವಾಗಬೇಕಾದ ಅನಿವಾರ್ಯತೆ ಇದೆ. ಮುಖ್ಯವಾಗಿ ಹರಕೆ ಆಟ ಆಡುವ ಮೇಳಗಳೂ ಪೂರ್ವರಂಗಕ್ಕೆ ಆದ್ಯತೆ ನೀಡದಿರುವುದು ಖೇದದ ವಿಚಾರ. ಆಟ ಆಡಿಸುವವರು ಸಂಜೆಯಿಂದ ಮುಂಜಾನೆ ತನಕ ಆಟ ನೋಡುತ್ತಾ ಕುಳಿತಿರುವುದಿಲ್ಲ ಎನ್ನುವುದು ರಂಗಕ್ರಿಯೆಗಳನ್ನು ಮೊಟಕುಗೊಳಿಸಲು ಸಮರ್ಥನೆಯಲ್ಲ. ಪ್ರೇಕ್ಷಕರೆಲ್ಲ ಬೆಳಗ್ಗಿನ ತನಕ ಕುಳಿತಿರುವುದಿಲ್ಲ ಎನ್ನುವುದು ಪ್ರದರ್ಶನ ಅಚ್ಚು ಕಟ್ಟಾಗಿದೆಯೇ ಎಂದು ವಾಪಾಸು ಪ್ರತಿಫಲಿಸುವ ಸಾಧ್ಯತೆಗೆ ಎಡೆ ಮಾಡಿಕೊಡುತ್ತದೆ. ಪೂರ್ವರಂಗಕ್ಕೆ ಬೇಕಾದ ಹಿರಿಯ ಕಿರಿಯ ಕಲಾವಿದರ ಲಭ್ಯತೆ ಇರುವುದಿಲ್ಲ ಎಂಬ ವಾದ ಈ ಶತಮಾನದ ಅಂತ್ಯದವರೆಗೂ ಆಟ ಬುಕ್ ಆಗಿದೆ ಎನ್ನುವವರ ಪಾಲಿಗೆ ಸಮರ್ಪಕ ಹಾಗೂ ಪ್ರಬುದ್ಧ ಹೇಳಿಕೆಯಾಗಲಾರದು. ಸಿದ್ಧತೆಯಲ್ಲಿರಬೇಕಾದುದು ಯಾರ ಜವಾಬ್ದಾರಿ ಎನ್ನುವುದು ಸ್ವಯಂವೇದ್ಯ. ಆಟ ಆಡಿಸುವವರು ಒಂದು ವಾರದ ಮೊದಲೇ ಗವಲು ಬಿಟ್ಟಿರುತ್ತಾರೆ. ಅವರ ಶ್ರದ್ಧಾಭಕ್ತಿಯ ಸಂಕೇತ. ವೀಳ್ಯ ಕೊಟ್ಟಿರುತ್ತಾರೆ. ಪಡಿಯಕ್ಕಿ ಸುರಿದಿರುತ್ತಾರೆ. ಆಟ ಬೆಳಕಿನ ಸೇವೆ ಎಂಬ ಹಾಗೆ ಸೇವಾ ಪಟ್ಟಿಯಲ್ಲಿ ನಮೂದಾಗಿರುತ್ತದೆ. ಉಳಿದ ಸೇವೆಗಳನ್ನು ಅವುಗಳ ಯಥಾ ವಿಧಿ ವಿಧಾನದಂತೆ ನಿರ್ವಹಣೆ ಮಾಡುವಂತೆ ಹರಕೆ ಆಟದಲ್ಲಿ ಪೂರ್ವರಂಗ" ಅದರ ಯಥಾ ವಿಧಿ ವಿಧಾನವೆಂಬಂತೆ ಪರಿಗಣಿಸಿ ನಿರ್ವಹಿಸುವ ಹೊಣೆಗಾರಿಕೆ ಸಂಬಂಧಪಟ್ಟವರಿಗೆ ಇದೆ. ಆಗ ನಿಜವಾದ ಬೆಳಕಿನ ಸೇವೆ ಆದೀತು. ಸುಧಾರಣೆ ಹಾರೈಸುವ.

**ಲೇಖಕರು – ಬೇಳೂರು ರಾಘವ ಶೆಟ್ಟಿ, "**ಕೃಷ್ಣದೇವ**"**, ಚಿತ್ರಪಾಡಿ, ಅಂಚೆ ಸಾಲಿಗ್ರಾಮ –೫೭೬೨೨೫, ಉಡುಪಿ ತಾಲೂಕು ಮತ್ತು ಜಿಲ್ಲೆ, ಮೊ: ೯೪೪೮೮೪೨೯೪೦

## ಕಾಡುವ ಪಾತ್ರ/ ಪ್ರಸಂಗ/ ಸನ್ನಿವೇಶ

ಕಲಾವಿದರ ಯಕ್ಷಾನುಭವದ ಪ್ರಮುಖ ನೆನಪು/ಘಟನೆಗಳನ್ನು ದಾಖಲೀಕರಿಸುವ ಅಂಕಣ ಇದು. ಪ್ರತೀ ಸಂಚಿಕೆಯಲ್ಲಿ ಇಬ್ಬರು ಕಲಾವಿದರ ಅನುಭವಗಳನ್ನು ಇಲ್ಲಿ ಸಾದರಪಡಿಸುತ್ತಿದ್ದೇವೆ. ಈ ತಿಂಗಳ ಸಂಚಿಕೆಯಲ್ಲಿ ಮಂದಾರ್ತಿ ಮೇಳದ ಕಲಾವಿದರು **ಚಂದ್ರ ಕುಮಾರ್ ನೀರ್ಜೆಡ್ಡು** ಹಾಗೂ ತಾಳಮದ್ದಳೆ ಅರ್ಥಧಾರಿ ಹಾಗೂ ವೇಷಧಾರಿಗಳಾದ **ಜನಾರ್ಧನ ಮಂಡಗಾರ್ ಶೃಂಗೇರಿ**ಯವರ ಅನುಭವಗಳ ತುಣುಕು ಪ್ರಕಟವಾಗಿದೆ.

### ಕಲಾವಿದರು – ಚಂದ್ರ ಕುಮಾರ್ ನೀರ್ಜೆಡ್ಡು



ತಂದೆ– ದಿ. ವೀರ ಕುಲಾಲ

ತಾಯಿ – ಬೆಳಕು ಕುಲಾಲ್ತಿ

ಜನ್ಮ ದಿನಾಂಕ – ೨೧–೭–೧೯೭೫

ವಿದ್ಯಾಭ್ಯಾಸ – ೫ ನೆ ತರಗತಿ

ಧರ್ಮಪತ್ನಿ – ಲಕ್ಷ್ಮಿ

ಮಕ್ಕಳು – ಸಹನ, ಸಾತ್ವಿಕ

ಗುರುಗಳು – ಮದ್ದಳೆವಾದಕರಾದ ಬಸವ ಗಾಣಿಗರಲ್ಲಿ ತಾಳಾಭ್ಯಾಸ

ಹೆಜ್ಜೆಗಾರಿಕೆ – ಮುಂಡಾಡಿ ಬಸವ ಮರಕಾಲ

ಸಾಹಿತ್ಯಿಕವಾಗಿ ಪ್ರಭಾವಿಸಿದವರು – ದಿ. ಸಿದ್ದಕಟ್ಟೆ ವಿಶ್ವನಾಥ ಶೆಟ್ಟರು.

ಸೇವೆ ಸಲ್ಲಿಸಿದ ಮೇಳಗಳು– ಮಂದಾರ್ತಿ ಮತ್ತು ಸಾಲಿಗ್ರಾಮ ಮೇಳ

> ***"ನನಗೆ ಸಾಹಿತ್ಯಿಕವಾದ ರಂಗಕ್ಕೆ ಬೇಕಾದ ಶಾಬ್ದಿಕವಾದ ಸಂಪತ್ತನ್ನು ಒದಗಿಸಿಕೊಡುವಲ್ಲಿ ಸಿದ್ದಕಟ್ಟೆ ವಿಶ್ವನಾಥ ಶೆಟ್ಟಿ ಅವರ ಪಾತ್ರ ಹಿರಿದಾದ್ದು." – ಚಂದ್ರ ಕುಮಾರ್ ನೀರ್ಜೆಡ್ಡು***

ಸುಮಾರು ೧೦ ವರ್ಷ ಪ್ರಾಯದಲ್ಲೇ ಬಯಲಾಟ ಮೇಳವಾದ ಮಂದಾರ್ತಿಯಲ್ಲಿ ಕೋಡಂಗಿ ವೇಷಧಾರಿಯಾಗಿ ಸೇರ್ಪಡೆಗೊಂಡು ನಂತರದ ದಿನಗಳಲ್ಲಿ ಬಾಲಗೋಪಾಲ ವೇಷವನ್ನೂ ನಿರ್ವಹಿಸಿ, ಈಗ ಪ್ರಬುದ್ಧ, ಅಸ್ಖಲಿತ, ನಿರರ್ಗಳ, ವಾಕ್ ಚಾತುರ್ಯವನ್ನು ಹೊಂದಿರುವ ಪ್ರಬುದ್ಧ ಪ್ರತಿಭೆ ಹಾಗೂ ಹಿರಿಯ ಕಲಾವಿದರು ಚಂದ್ರ ಕುಮಾರ್ ನೀಜೆಡ್ಡು. ಯಕ್ಷ ಜೀವನದ ಮೂರನೇ ವರ್ಷದಲ್ಲಿ ಸಾಲಿಗ್ರಾಮ ಮೇಳಕ್ಕೆ ಸೇರ್ಪಗೊಂಡು ೧೮ ವರ್ಷಗಳ ಕಾಲ ಟೆಂಟ್ ಮೇಳವಾದ ಸಾಲಿಗ್ರಾಮದಲ್ಲಿ ತಿರುಗಾಟ ನಡೆಸಿದ್ದಾರೆ. ಮತ್ತೆ ಮಂದಾರ್ತಿ ಮೇಳದಲ್ಲಿ ಕಳೆದ ೧೫ ವರ್ಷಗಳಿಂದ ತಿರುಗಾಟ ನಡೆಸುತ್ತಿರುವ ಚಂದ್ರಕುಮಾರರ ಕೃಷ್ಣ ನ ಪಾತ್ರವನ್ನು ಮೆಚ್ಚದವರೇ ಇಲ್ಲ. ಈ ಬಗ್ಗೆ ಚಂದ್ರಕುಮಾರ್ ಅವರು ತಮ್ಮ ಅನುಭವಗಳನ್ನು ಹಂಚಿಕೊಳ್ಳುವುದು ಹೀಗೆ – "ನನಗೆ ಬಾಲ್ಯದಲ್ಲೇ ಹಿರಿಯ ಕಲಾವಿದರ ಒಟನಾಟ ಹಾಗೂ ರಂಗ ಸಂಸ್ಕಾರ ಸಿಕ್ಕಿದೆ. ಪ್ರಾರಂಭದಲ್ಲಿ ತಾಳಾಭ್ಯಾಸವನ್ನು ಮದ್ದಳೆಗಾರರಾದ ದಿವಂಗತ ಬಸವ ಗಾಣಿಗ ಕೊರ್ಗಿಕಟ್ಟೆ ಅವರಲ್ಲಿ ಮಾಡಿದೆ. ಮುಂಡಾಡಿ ಬಸವ ಮರಕಾಲ ಅವರಿಂದ ಹೆಜ್ಜೆಗಾರಿಕೆ ಕಲಿತೆ. ಸಾಹಿತ್ಯಿಕವಾದ ರಂಗಕ್ಕೆ ಬೇಕಾದ ಶಾಬ್ದಿಕವಾದ ಸಂಪತ್ತನ್ನು ಒದಗಿಸಿಕೊಡುವಲ್ಲಿ ಸಿದ್ದಕಟ್ಟೆ ವಿಶ್ವನಾಥ ಶೆಟ್ಟಿ ಅವರ ಪಾತ್ರ ಹಿರಿದಾದ್ದು. ರಂಗದಲ್ಲಿ ವಿಶ್ವನಾಥ ಶೆಟ್ಟಿಯವರದು

ಸರಳವಾದ ನಿರ್ವಹಣೆ. ಅರ್ಥಗಾರಿಕೆಯ ಶೈಲಿಯೂ ಹಾಗೆಯೇ. ಸಾಮಾನ್ಯ ಜನರಿಗೆ ಅರ್ಥವಾಗುವಂತಹಾ ಶೈಲಿ. ಸರಳವಾದ ಶಬ್ದಗಳನ್ನೇ ಉಪಯೋಗಿಸುತ್ತಿದ್ರು. ಒಮ್ಮೆ ಅವರ ಪಾತ್ರ ನೋಡಿದ ಕೂಡ್ಲೇ ಮನನ ಆಗ್ತಿತ್ತು. ಅವರು ಹೆಚ್ಚಾಗಿ ಸಾತ್ವಿಕ ವೇಷಗಳನ್ನೇ ಮಾಡ್ತಿದ್ರು. ನನ್ನ ಆಸಕ್ತಿ ಇದ್ದದ್ದು ಹಾಗೆಯೇ. ಅಕ್ರೂರ, ಸಂಜಯ ಕೃಷ್ಣ, ವಿಷ್ಣು ಸುಧನ್ವ ಹರಿಶ್ಚಂದ್ರ ಹೀಗೆ ಸಾತ್ವಿಕ ಪಾತ್ರಗಳನ್ನೇ ಮಾಡ್ತಾ ಇದ್ದೆ ನಾನು. ಪ್ರಸಂಗಾಧ್ಯಯನ ಮಾಡುವಲ್ಲಿ ಬೇಕು ಬೇಕಾದ ಪುಸ್ತಕಗಳನ್ನು ಓದಿಕೊಳ್ಳುತ್ತೇನೆ. ರಂಗದಲ್ಲಿ ಸಮಸ್ಯೆಯಾದ ವಿಷಯಗಳನ್ನು ಪುಸ್ತದಲ್ಲಿ ಹುಡುಕಿ ತಿಳಿದುಕೊಳ್ಳುತ್ತಿದ್ದೆ. ಹಿರಿಯ ಕಲಾವಿದರಾದ ಸಾಮಗರಲ್ಲಿ, ಸಿದ್ದಕಟ್ಟೆ ವಿಶ್ವನಾಥರಲ್ಲಿ, ಹಿರಿಯರಲ್ಲಿ ಸೂಕ್ಷ್ಮ ವಿಷಯಗಳನ್ನು ಕೇಳಿ ತಿಳಿದುಕೊಳ್ತಿದ್ದೆ. ಮಂದಾರ್ತಿ ಮೇಳದಲ್ಲಿ ಕೃಷ್ಣನ ಪಾತ್ರಕ್ಕೆ ಮೊದಲು ಗುರುತಿಸುವುದು ನನ್ನನ್ನೇ. ಭಾರತದ ಕಥೆಗಳಲ್ಲಿ ಬರುವ ಕೃಷ್ಣ ಪಾತ್ರಗಳೆಂದರೆ ನನಗೂ ಏನೋ ಒಂದು ರೀತಿಯ ತಾದ್ಯಾತ್ಮ. ನನ್ನ ಒಡನಾಟದಲ್ಲಿದ್ದ ಹೆಚ್ಚಿನ ಕಲಾವಿದರು ಎಲ್ಲರೂ ಪ್ರಬುದ್ಧರೇ. ವಾಸುದೇವ ಸಾಮಗರು, ಚೆನ್ನಪ್ಪ ಶೆಟ್ಟರು, ಸಾಹಿತ್ಯಿಕವಾಗಿ ಮೇಲ್ಮಟ್ಟದ ಬೆಳವಣಿಗೆ ಪಡೆದವರೇ. ಮಧ್ಯ ಬಡಗಿನಲ್ಲಿ ಆರ್ಗೋಡ್ ಮೋಹನದಾಸ ಶಣೈ ಸಾಹಿತ್ಯಿಕವಾಗಿ ಕೃಷಿ ಮಾಡಿದವರು. ಸ್ತ್ರೀ ವೇಷದವರಾದ ಎಂಎ ನಾಯಕ್ ರವರೂ ಸಾಹಿತ್ಯಕ್ಕೆ ಒತ್ತು ಕೊಟ್ಟು ಹೋದವರು. ಅವರಿಗೂ ಮೂಲದಲ್ಲಿ ಅಂಥ ಒಡನಾಟವೇ ಸಿಕ್ಕಿತು ನನಗೂ ಬಾಲ್ಯದಲ್ಲಿ ಅಂಥ ಒಡನಾಟ ಸಿಕ್ಕಿತು. ನನಗೆ ವೈಯುಕ್ತಿಕವಾಗಿ ಸಿದ್ದಕಟ್ಟೆ ವಿಶ್ವನಾಥ ಶೆಟ್ಟಿಯವರು ಬರೆದ  ವಿಷಮ ಸಮರಂಗ ಪ್ರಸಂಗದ ಪರಂಧಾಮ ಭಾಗದ ಕೃಷ್ಣನ ಕೊನೆಯ ಭಾಗ ತುಂಬ ಆಪ್ತವಾದದ್ದು. ಅದರಲ್ಲಿ ಬರುವ ಎಲ್ಲ ಸನ್ನಿವೇಷಗಳೂ ನನಗೆ ಆಪ್ತವೇ.. ಇನ್ನು ರಂಗಕ್ಕೆ ಹೋಗುವಾಗ ಕೆಲವು ಸೂಕ್ಷ್ಮಗಳನ್ನು ಸ್ವಲ್ಪ ತಿಳಿದುಕೊಂಡು ಹೋದರೆ ಪಾತ್ರಧಾರಿಗಳಿಗೆ ಒಳಿತು. ಆ ಪಾತ್ರದ ಭಾವನೆ ಏನು, ಆ ಪಾತ್ರದ ಆ ಹೊತ್ತಿನ ವಯಸ್ಸು ಎಷ್ಟಿಬಹುದು ಎನ್ನುವುದನ್ನು ತಿಳಿದುಕೊಂಡು ಹೋಗಬೇಕು. ನಮಗೇನೋ ಪಾಂಡಿತ್ಯ ಇದೆ ಎನ್ನುವುದನ್ನು ತೋರಿಸುವುದಲ್ಲ. ಎಳೆಯ ಪ್ರಾಯದ ವೇಷ ಮಾಡಿಕೊಂಡು ಪಾಂಡಿತ್ಯತದ ಮಾತುಗಳನ್ನು ಹೇಳುವುದಲ್ಲ. ಪಾತ್ರದ ವಯಸನ್ನು ಗಮನದಲ್ಲಿಟ್ಕೊಂಡು ನಾವು ವ್ಯವಹಾರ ಮಾಡಬೇಕು. ಆಗ ಅದು ಸಹಜವಾಗ್ತದೆ ಎನ್ನುವುದು ನನ್ನ ಅನಿಸಿಕೆ.

ಈಗಿನ ಯುವಕಲಾವಿದರು ಬರೇ ಕುಣಿಯುವುದಕ್ಕೆ ಅವರ ಆಸಕ್ತಿ ಹೊಂದಿದ್ದಾರೆ. ಸಾಹಿತ್ಯಿಕವಾದ ತಿದ್ದುಪಡಿಗೆ ಒಳಪಡುವುದು ಕಡಿಮೆ. ದೇಹದಲ್ಲಿ ಬಲ ಇದೆ ಎಂದು ಕುಣಿಯುತ್ತಾರೆ ವಿನಹ ಆ ಪದ್ಯಕ್ಕೆ  ಅರ್ಥ ಏನು ಹೇಳಬೇಕು ಎಂಬುದರ ಬಗ್ಗೆ ಚಿಂತನೆ ಮಾಡುವುದಿಲ್ಲ. ಅದರ ಬಗ್ಗೆ ನನಗೆ ಬೇಸರ ಇದೆ.

ಕಾಲ್ಪನಿಕ ಹಾಗೂ ಐತಿಹಾಸಿಕ ಪ್ರಸಂಗಗಳಲ್ಲಿ ಪಾತ್ರ ನಿರ್ವಹಣೆ ಮಾಡುವಾಗಲೂ ಆಳವಾಗಿ ತಿಳಿದುಕೊಂಡೇ ರಂಗಕ್ಕೆ ಹೋಗಬೇಕು ಎಂಬುದು ನನ್ನ ಅಭಿಪ್ರಾಯ. ಉದಾಹರಣೆಗೆ ಡಾ. ಚಂದ್ರಶೇಕರ್ ಶೆಟ್ಟಿ ಬರೆದ ಅಳಿಯರಾಮರಾಯ ರಂಗನಾಯಕಿ ಮೊದಲಾದ ಐತಿಹಾಸಿಕ ಪ್ರಸಂಗಗಳನ್ನು ಮಾಡುವಾಗ ಸಣ್ಣ ಪಾತ್ರಗಳಾದರೂ ಅದನ್ನು ಅಧ್ಯಯನ ಮಾಡಿಯೇ ಪಾತ್ರ ನಿರ್ವಹಿಸಬೇಕು ಎಂದು ನನ್ನ ಅನಿಸಿಕೆ. ಅದಕ್ಕಾಗಿ ನಾನು ಕನ್ನಡಿಗರ ಕಾಳರಾತ್ರಿ ಮೊದಲಾದ ಕಾದಂಬರಿಗಳನ್ನೂ ಓದಬೇಕಾಯ್ತು. ಪುರಾಣದ ಚೌಕಟ್ಟಿನಲ್ಲಿಯೇ ಐತಿಹಾಸಿಕ ಕಥೆಯನ್ನು ಜನರಿಗೆ ಚಿತ್ರಿಸಿ ತೋರಿಸುವ ಮನಸ್ಥಿತಿಯಿಂದ ರಂಗಕ್ಕೆ ಹೋಗಬೇಕು ಎಂಬುದು ನನ್ನ ಅನಿಸಿಕೆ.

ಮೊದಲೆಲ್ಲಾ ಅರ್ಥಪೂರ್ಣ ಕಾಲ್ಪನಿಕ ಪ್ರಸಂಗಗಳನ್ನು ರಚಿಸುತ್ತಿದ್ದರು. ಇತ್ತೀಚಿನ ಕೆಲವು ಪ್ರಸಂಗಗಳು ದುರ್ಬಲ ಅನಿಸ್ತವೆ. ಕೆಲವು ವರ್ಷಗಳ ಹಿಂದೆ ಧರ್ಮ ಸಂಕ್ರಾತಿ ಜಯಭೇರಿ ಬಾರಿಸಿದ ಒಂದು ಪ್ರಸಂಗ. ಅದರ ಕಥಾವಸ್ತುವೂ ಚೆಂದವಾಗಿತ್ತು ಪುರುಷ ಪ್ರಯತ್ನ ಮೇಲೋ ದೈವಬಲ ಮೇಲೋ ಎನ್ನುವುದರ ಬಗ್ಗೆ ಸರಿಯಾದ ಅರ್ಥಗಾರಿಕೆ ಮಾಡಲು, ವಾದಿ ಪ್ರತಿವಾದಿಗೆ ವಾದ ಮಂಡನೆ ಮಾಡುವುದಕ್ಕೆ ವಿಷಯಗಳಿತ್ತು. ಒಳ್ಳೆಯ ಸಂದೇಶವನ್ನು ಹೊಂದಿರುತ್ತಿದ್ದವು. ಕಥಾವಸ್ತುವೇ ದುರ್ಬಲವಾಗಿದ್ರೆ ಯಾವ ಕಲಾವಿದ ಎಷ್ಟೇ ಶ್ರಮ ವಹಿಸಿದ್ರೂ ಕಷ್ಟವೇ. ಕಥೆಯಲ್ಲೂ ಗಟ್ಟಿತನ ಇದ್ರೆ ಕಲಾವಿದನೂ ತೋರಿಸಿಕೊಳ್ಳಲು ಸಾಧ್ಯವಾಗುತ್ತದೆ. ಪಂಚಾಂಗವೇ ಗಟ್ಟಿ ಇಲ್ಲದೇ ಹೋದರೇ ಕಟ್ಟಿದ ಮನೆ ಎಷ್ಟು ಸಮಯ ಉಳಿದೀತು?

***ವೇಷಭೂಷಣಗಳ ಬದಲಾವಣೆ ಬಗ್ಗೆ***

ಇತ್ತೀಚಿನ ಕಲಾವಿದರು ನಡುತಿಟ್ಟಿನ ಆಭರಣಗಳನ್ನು ಬಳಸುವುದಿಲ್ಲ. ಇದನ್ನು ಬಿಟ್ಟು, ಉತ್ತರದ ಪದ್ಧತಿಯನ್ನು ಹೆಚ್ಚು ಅನುಕರಿಸ್ತಿದ್ದಾರೆ. ಕಾರಣ ಸ್ವಂತ ವಸ್ತುಗಳನ್ನು ಮಾಡಿಕೊಳ್ಳುವುದು. ತಮ್ಮ ವೇಷ ಚೆಂದ ಕಾಣುವ ಉದ್ದೇಶದಿಂದ ಉತ್ತರದ ಆಭರಣ ಬಳಸುತ್ತಾರೆ. ಆದರೆ ನಾನು ನಡುತಿಟ್ಟಿನ ಚೌಕದ ಎದೆಕಟ್ಟು ಮುಳ್ಳಿನ ಭುಜಕಟ್ಟು ಉಪಯೋಗಿಸುತ್ತೇನೆ.

***ಟೆಂಟ್ ಮತ್ತು ಬಯಲಾಟ ಮೇಳಕ್ಕೆ ಇರುವ ವ್ಯತ್ಯಾಸ***

ಬಯಲಾಟದ ಯಕ್ಷಗಾನ ಕಾರ್ಯಕ್ರಮ ಭಕ್ತಿಯಿಂದ ನಡೆಯುವ ಕಾರ್ಯಕ್ರಮ. ಟೆಂಟ್ ಮೇಳದಲ್ಲಿ ಬರುವ ಪ್ರೇಕ್ಷಕರು ಕಲಾವಿದನ ಸಾಮರ್ಥ್ಯವನ್ನು ಅಳೆಯುತ್ತಾರೆ. ಅಲ್ಲಿ ಪ್ರದರ್ಶನವನ್ನು ದುಡ್ಡು ಕೊಟ್ಟು ನೋಡಲು ಬರುತ್ತಾರೆ. ತಾವು ಕೊಟ್ಟ ದುಡ್ಡು ವ್ಯರ್ಥವಾಗಬಾರದು ಎಂಬ ಮಾನದಂಡದಲ್ಲಿ ಅಳೆಯುವವರೇ ಇರ್ತಾರೆ. ಟೆಂಟ್ ಮೇಳದಲಿ ಕಲಾವಿದನ ಪ್ರಯತ್ನವೂ ಬೇಕಾಗ್ತದೆ. ಪ್ರಸಂಗ ಸೋತರೆ ಯಜಮಾನನಿಗೆ ನಷ್ಟ ಆಗ್ತದೆ. ತಿರುಗಾಟದಲ್ಲಿ ಬೇಡಿಕೆ ಕಡಿಮೆ ಆಗ್ತದೆ. ಟೆಂಟ್ ಮೇಳದಲ್ಲಿ ಕಲಾವಿದನನ್ನು ಜನರು ಬೇಗ ಗುರುತಿಸ್ತಾರೆ. ಪ್ರಚಾರದ ದೃಷ್ಟಿಯಿಂದ ಗುರುತಿಸಿ ಬೆಳಕಿಗೆ ತರ್ತಾರೆ. ಬಯಲಾಟ ಮೇಳದ ಕಲಾವಿದರು ಪ್ರಯೋಗಗಳಿಗೆ ಒಳಗಾಗೋದಿಲ್ಲ. ಸಾಹಿತ್ಯಿಕವಾದ ಬೆಳವಣಿಗೆ ಇತ್ತೀಚಿಗಿನ ಹುಡುಗರಲ್ಲಿ ಕಡಿಮೆ ಆಗ್ತದೆ. ಅದಕ್ಕೆ ಕಾರಣ ಮೊಬೈಲ್ ಗೀಳೂ ಹೌದು

***ಯಕ್ಷಗಾನದ ಬಗ್ಗೆ ಬೇರೆಯವರಿಗೆ ಹೇಳಿಕೊಡುವ ಯೋಚನೆ***

ನಾನು ಕಲಿತ ಕಲೆಯನ್ನು ಅಪಾತ್ರರಿಗೆ ನೀಡಬಾರದು ಎಂಬ ಯೋಚನೆ ನನ್ನದು. ಸತ್ಪಾತ್ರರು ಸಿಕ್ಕಿದ್ರೆ ಅಂತಹಾ ಹುಡುಗರನ್ನು ದಾರಿಗೆ ತರಬೇಕು ಎಂಬ ಯೋಚನೆ ಇದೆ. ಚೌಕಿಯಲ್ಲಿ ಯಾರಾದರೂ ಕೇಳಿದಾಗ ಗೊತ್ತಿದ್ದನ್ನು ಹೇಳಿಕೊಡ್ತೇನೆ. ಯಾರೇ ಆಗಲಿ ಶಿಷ್ಯ ಅಂತ ಹೇಳಿಕೊಳ್ಳುವುದು ಬೇಕಾಗಿಲ್ಲ. ಯಾಕೆಂದರೆ ಗುರುವಿನ ಸ್ಥಾನದ ಮಹತ್ವ ನನಗೆ ಗೊತ್ತು. ಸುಮ್ಮನೆ ಗುರು ಅಂತ ಹೇಳಿಸಿಕೊಳ್ಳುವ ಎತ್ತರಕ್ಕೆ ನಾನು ಏರಲಿಲ್ಲ ಅಂತನೇ ಹೇಳ್ತೇನೆ.

***ಮರೆಯಲಾಗದ ಘಟನೆ*** – ನಾನು ಎಳೆಯ ಹರೆಯದಲ್ಲೇ ಸಾಲಿಗ್ರಾಮ ಮೇಳದಲ್ಲಿದ್ದಾಗ ಕಾಳಿಂಗ ನಾವುಡರ ಭಾಗವತಿಕೆ ಇತ್ತು. ಅವರೊಂದಿಗೆ ನಾನು ೩ ವರ್ಷ ತಿರುಗಾಟ ಮಾಡಿದ್ದೇನೆ. ಅವರ ರಂಗ ಶಿಕ್ಷಣ ಮರೆಯಲಾಗದೇ ಇರುವಂತದ್ದು. ರಂಗದಲ್ಲೇ ಅವರು ಕಲಾವಿದರನ್ನು ತಿದ್ದುತ್ತಿದ್ದರು. ಪಾಠ ಹೇಳಿಕೊಡ್ತಾ ಇದ್ರು. ಒಂದೊಮ್ಮೆ ನಾನು ವೇಷ ಮಾಡಿಕೊಂಡು ನಿದ್ರೆ ಮಾಡಿ ಬಿಟ್ಟಿದ್ದೆ. ಸಮಯ ಬಂದಾಗಲೂ ರಂಗಕ್ಕೆ ಹೋಗಲೇ ಇಲ್ಲ. ಆಮೇಲೆ ಎಚ್ಚರವಾದಾದ ನಾವುಡರು ನನಗೆ ಪದ್ಯವನ್ನೇ ಹೇಳಲಿಲ್ಲ. ಚೌಕಿಗೆ ಬಂದವರು ನನ್ನ ಮುಖವನ್ನೂ ಕಾಣಲಿಲ್ಲ. ಇದು ನಾನು ಜೀವನದಲ್ಲಿ ಅವರಿಂದ ಕಲಿತ ಮರೆಯಲಾಗದ ಪಾಠ. ಅದರಿಂದಾಗಿ ಮತ್ತೆ ಯಾವತ್ತೂ ನಾನು ತಡವಾಗಿ ರಂಗ ಪ್ರವೇಶ ಮಾಡಿದ್ದೇ ಇಲ್ಲ.

***ಇಂದಿನ ಅಭಿಮಾನಿಗಳಿಗೆ ಹಾಗೂ ಕಲಾವಿದರಿಗೆ ನಿಮ್ಮ ಸಲಹೆ*** – ಚೌಕಟ್ಟನ್ನು ಮೀರದೆ ಶಾಸ್ತ್ರೀಯತೆಯನ್ನು ಉಳಿಸಿಕೊಂಡು ಹೋಗುವಲ್ಲಿ ಕೇವಲ ಕಲಾವಿದ ಮಾತ್ರ ಅಲ್ಲ ಸಂಘಟಕರೂ ಮನಸು ಏಮಾಡಬೇಕು. ಕಲಾವಿದನಿಗೆ ಸಂಬಳ ಕೊಟ್ಟು ಮೇಳ ನಡೆಸುವ ಯಜಮಾನನಿಗೆ ಕಲಾವಿದರಿಗೆ ಹೇಳುವ ಸಾಮರ್ಥ್ಯ ಇದೆ. ಆದುದರಿಂದ ಸಂಪ್ರದಾಯದ ಪರಿಧಿಯನ್ನು ಮೀರದೆ ಇರಲಿ ಎನ್ನುವುದು ನನ್ನ ಅನಿಸಿಕೆ. ಕುಣಿತಕ್ಕೆ ಮಾತ್ರ ಪ್ರಾಶಸ್ತ್ಯ ಕೊಡದೆ ಎಲ್ಲಾ ಅಂಗವನ್ನು ಬಿಂಬಿಸುವ ಕಲಾವಿದರಾಗಿ ರೂಪುಗೊಳ್ಳಬೇಕು. ರಂಗಕ್ಕೆ ಬೇಕಾದ ಕಲಾವಿದರನ್ನು ರೂಪಿಸುವಲ್ಲಿ ಮಾರಣಕಟ್ಟೆ ಮುತ್ತಯ್ಯ ಹೆಗಡೆಯವರನ್ನು ಇಂದಿಗೂ ಕಲಾವಿದರು ನೆನಪಿಸಿಕೊಳ್ಳುತ್ತಾರೆ. ಅಂತಹಾ ಯಜಮಾನರಿದ್ರೆ ಸ್ವಲ್ಪ ಮಟ್ಟಿಗಾದ್ರೂ ಕಲಾವಿದರನ್ನು ಸಂಪ್ರದಾಯದ ಪರಿಧಿಯೊಳಗೆ ರೂಪಿಸ್ಲಿಕ್ಕಾಗ್ತದೆ. ಎಂದು ನನ್ನ ಅಭಿಪ್ರಾಯ.

**ಕಲಾವಿದರು – ಜನಾರ್ಧನ ಮಂಡಗಾರ್ ಶೃಂಗೇರಿ**



***ಇತ್ತೀಚಿಗೆ ಒಂದು ಪದ್ಯಕ್ಕೆ ೧೨ – ೧೫ ನಿಮಿಷ ಒಬ್ಬ ವೇಷಧಾರಿ ಅಭಿನಯಿಸ್ತಾರೆ. ಕೇವಲ ೫–೬ ನಿಮಿಷದಲ್ಲಿ ಸಂಭಾಷಣೆ ಮುಗಿದೇ ಹೋಗುತ್ತದೆ. ಜನರ ನಿರೀಕ್ಷೆಗೆ ಬೇಕಾದಂತಹಾ ವಿಶೇಷವಾದ ವಿಷಯವನ್ನು, ಸಂದೇಶವನ್ನು ಕೊಡುವಲ್ಲಿ ಈಗಿನ ಪ್ರದರ್ಶನಗಳು ಎಲ್ಲೋ ಸೋಲುತ್ತಿವೆಯಾ ಎಂದೆನಿಸುತ್ತದೆ.***

ಮಲೆನಾಡಿನ ಶೃಂಗೇರಿ ಭಾಗದಲ್ಲಿ ಹವ್ಯಾಸಿ ತಾಳಮದ್ದಳೆ ಅರ್ಥಧಾರಿಗಳಾಗಿ, ಪ್ರಬುದ್ಧ ವೇಷಧಾರಿಗಳಾಗಿ ಕಲಾ ಕೈಂಕರ್ಯದಲ್ಲಿ ತೊಡಗಿಸಿಕೊಂಡಿರುವ ಶ್ರೀ. ಜನಾರ್ಧನ ಮಂಡಗಾರ್ ರವರ ಯಕ್ಷ ಬದುಕಿನ ನೋಟ ಹೀಗಿದೆ

ಇವರ ಕುಟುಂಬದ ಹಿನ್ನಲೆಯೇ ಯಕ್ಷಗಾನಾಸಕ್ತರಾಗಿದ್ದು, ತಂದೆ ತಾಯಿ ಅಣ್ಣದಿರು, ಮಾವ ಹಾಗೂ ಪರಿಸರವೇ ಇವರಿಗೆ ಯಕ್ಷಗಾನದ ಮೇಲೆ ಒಲವು ಮೂಡಲು ಕಾಣವಾಯಿತು. ಒಂಬತ್ತನೇ ತರಗತಿಯಲ್ಲಿರುವಾಗಲೇ ಇವರಿಗೆ ಅವರ ಊರಿನ ಶ್ರೀ ವೆಂಕಟೇಶ್ವರ ಯಕ್ಷಗಾನ ಕಲಾ ಸಂಘದಲ್ಲಿ ತಾಳಮದ್ದಳೆಯಲ್ಲಿ ಅರ್ಥಧಾರಿಯಾಗಿ ಭಾಗವಹಿಸುವ ಅವಕಾಶ ಸಿಗುತ್ತದೆ. ನಂತರ ಶೃಂಗೇರಿಯಲ್ಲಿ ಜೆಸಿಬಿಎಂ ಕಾಲೇಜಿನಲ್ಲಿ ಪಿಯುಸಿ ಓದುತ್ತಿರುವಾಗ ಯಕ್ಷಗಾನ ಪ್ರದರ್ಶನದಲ್ಲಿ ಭಾಗವಹಿಸುವ ಅವಕಾಶ ಸಿಗುತ್ತದೆ. ಅಲ್ಲಿಂದ ಯಕ್ಷಗಾನದಲ್ಲಿ ತೊಡಗಿಸಿಕೊಳ್ಳುವಿಕೆ ಪ್ರಾರಂಭವಾಗಿ ಅವರ ಕಲಾಯಾನ ತಾಳಮದ್ದಳೆಯ ಪ್ರಬುದ್ಧ ವಾಗ್ಮಿಯಾಗಿ ಅವರನ್ನು ತಂದು ನಿಲ್ಲಿಸಿದೆ. ಶೃಂಗೇರಿ ತಾಲೂಕಿನ ಹೊನ್ನವಳ್ಳಿ ಎಂಬಲ್ಲಿ ಶ್ರೀ ವೆಂಕಟೇಶ್ವರ ಯಕ್ಷಗಾನ ಕಲಾಸಂಘ ಕಳೆದ ೪೮ ವರ್ಷಗಳಿಂದ ಅಸ್ಥಿತ್ವದಲ್ಲಿದ್ದು ಈ ಸಂಘದಲ್ಲಿ ಇವರ ಅಣ್ಣನೇ ಕಾರ್ಯದರ್ಶಿ ಮತ್ತೊಬ್ಬ ಅಣ್ಣ ಭಾಗವತರು ಹಾಗೂ ಜನಾರ್ಧ ಮಂಡಗಾರ್ ರವರು ಖಾಯಂ ವೇಷಧಾರಿ ನಿರ್ದೇಶಕರಾಗಿ ತೊಡಗಿಸಿಕೊಂಡಿದ್ದಾರೆ. ಈ ಕಲೆ ಇವರ ಪ್ರಧಾನ ಹವ್ಯಾಸವಾಗಿದ್ದು ತಾಳಮದ್ದಳೆಯಲ್ಲಿ ಭಾಗವಹಿಸುವುದು, ಹಾಗೂ ವೇಷ ಮಾಡುವುದರಲ್ಲಿ ಸಿಗುವ ತೃಪ್ತಿ ಬೇರೆ ಯಾವುದರಲ್ಲೂ ಸಿಗುವುದಿಲ್ಲ ಎನ್ನುತ್ತಾರೆ.

ವೆಂಕಟೇಶ್ವರ ಯಕ್ಷಗಾನ ಕಲಾಸಂಘವು ಯಾವುದೇ ವಾಣಿಜ್ಯಾತ್ಮಕ ಉದ್ದೇಶಗಳನ್ನು ಹೊಂದಿರದೆ ಕೇವಲ ಕಲಾ ಪ್ರಸಾರಕ್ಕಾಗಿ ಶ್ರಮಿಸುತ್ತಿದೆ. ಸಂಘದ ನಿರ್ವಹಣೆಗೆ ದೊರೆತ ಅಲ್ಪ ಸ್ವಲ್ಪ ಸಂಭಾವನೆಯನ್ನು ಬಳಸಿಕೊಳ್ಳಲಾಗುತ್ತದೆ. ಪ್ರಾರಂಭದಲ್ಲಿ ವಿದ್ಯುಚ್ಛಕ್ತಿ ಇಲ್ಲದ ಕಾಲದಲ್ಲಿ ದೀಪದ ಬೆಳಕಿನಲ್ಲಿ ಪ್ರಾರಂಭವಾದ ಸಂಘ ತದನಂತರ ಸ್ವಂತ ಕಟ್ಟಡವನ್ನು ಹೊಂದುತ್ತದೆ. ಅಲ್ಲಿ ವಾರಕ್ಕೊಮ್ಮೆ ಶನಿವಾರ ಹಾಗೂ ಭಾನುವಾರದ ದಿನಗಳಲ್ಲಿ ಪೌರಾಣಿಕ ಪ್ರಸಂಗಗಳ ಅಧ್ಯಯನವನ್ನು ಸಂಘದ ಸದಸ್ಯರು ನಡೆಸಿಕೊಂಡು ಬರುತ್ತಾರೆ. ಕಲೆಯನ್ನು ಕಲಿಯುವುದಕ್ಕಾಗಿ ಗುರುಹಿರಿಯರನ್ನು ಕರೆಸಿ ಬೆಳೆದು ಬಂದ ಸಂಘ ಈಗ ವರ್ಷಕ್ಕೆ ೨೦–೩೦ ತಾಳಮದ್ದಳೆ ಕಾರ್ಯಕ್ರಮವನ್ನು ನೀಡುತ್ತಿದೆ. ಪ್ರತೀ ವರ್ಷ ಹೊನ್ನವಳ್ಳಿ ಹೋಮಾಗಿ ಬ್ರಹ್ಮಲಿಂಗೇಶ್ವರ ಸ್ವಾಮಿ ಸನ್ನಿಧಿಯಲ್ಲಿ ವಾರ್ಷಿಕ ಜಾತ್ರೆಗೆ, ವಾರ್ಷಿಕ ಚೌತಿಗೆ ನವರಾತ್ರಿಗೆ ಅತಿಥಿ ಕಲಾವಿದರ ಕೂಡುವಿಕೆಯಲ್ಲಿ ಬಯಲಾಟ ಪ್ರದರ್ಶನ ಮಾಡುತ್ತಾರೆ.

***ಪ್ರಶ್ನೆ– ಹಳೆಯ ಸಂಪ್ರದಾಯವನ್ನು ಉಳಿಸುವಲ್ಲಿ ಹಾಗೂ ಹೊಸತನ ಅಳವಡಿಸುವಲ್ಲಿ ನಿಮ್ಮ ಕೊಡುಗೆ?***

ನನ್ನ ಹಾಗೂ ನನ್ನ ಸಂಘದ ಪರಮೋದ್ದೇಶದಲ್ಲಿ ಪೌರಾಣಿಕ ಚೌಕಟ್ಟಿನೊಳಗೇ ಕಲಾಪ್ರದರ್ಶನ ಆಗಬೇಕು ಎನ್ನುವುದು ಪ್ರಧಾನವಾದ ಉದ್ದೇಶ. ೪೮ ವರ್ಷದಲ್ಲಿ ತಾಳಮದ್ದಳೆ ಹಾಗೂ ಬಯಲಾಟದಲ್ಲಿ ಪ್ರದರ್ಶನ ಮಾಡಿದ್ದು ಪೌರಾಣಿಕ ಪ್ರಸಂಗಗಳು. ಹೊಸ ಪ್ರಸಂಗಗಳನ್ನು ನೋಡ್ತೇವೆ. ಅದಕ್ಕೂ ನಮ್ಮ ಪ್ರೋತ್ಸಾಹ ಇದೆ. ಆದರೆ ನಾವು ಪ್ರದರ್ಶನ ನೀಡುವುದಿಲ್ಲ.

***ಪ್ರಶ್ನೆ– ಅತಿಥಿ, ಹೆಸರಾಂತ ವೃತ್ತಿಪರ ಕಲಾವಿದರು ತಂಡದಲ್ಲಿ ಭಾಗವಹಿಸಿದ ಹಿನ್ನಲೆ ಏನಾದರೂ ಇದೆಯಾ?***

ರಾಮದಾಸ ಸಾಮಗರು, ವಾಸುದೇವ ಸಾಮಗರು, ಸುಣ್ಣಂಬಳ ವಿಶ್ವೇಶ್ವರ ಭಟ್, ವಾಸುದೇವ ರಂಗಾಭಟ್, ಪ್ರಭಾಕರ ಜೋಶಿಯವರು ಜಬ್ಬರ್ ಸಮೋ, ರಾಧಾಕೃಷ್ಣ ಕಲ್ಚಾರ್ ಹೊಸ ಪೀಳಿಗೆಯಲ್ಲಿ ಪವನ್ ಕಿರಣ್ ಕೆರೆ ಅಜಿತ್ ಕಾರಂತ್ ಇವರೊಂದಿಗೆ ಸಾಕಷ್ಟು ಕಾರ್ಯಕ್ರಮಗಳನ್ನು ನಡೆಸಿದ್ದೇವೆ. ರಾಘವೇಂದ್ರ ಆಚಾರ್, ಪ್ರಸನ್ನ ಬಾಳ್ಕಲ್, ಹಿಲ್ಲೂರ್ ಸುಬ್ರಹ್ಮಣ್ಯ ಧಾರೇಶ್ವರ ಮೊದಲಾದ ಕಲಾವಿದರ ಒಡನಾಟದಲ್ಲಿ ಯಕ್ಷಗಾನ ಪ್ರದರ್ಶನ ನೀಡಿದ್ದಿದೆ. ಇನ್ನು ಕಾಳಿಂಗ ನಾವುಡರೊಂದಿಗೆ ೨ ತಾಳಮದ್ದಳೆಯಲ್ಲಿ ಭಾಗವಹಿಸಿದ್ದೇನೆ ಎಂಬುದು ಸವಿ ನೆನಪು, ಭೀಷ್ಮ ವಿಜಯದ ಪ್ರಸಂಗದಲ್ಲಿ ಕಾಳಿಂಗ ನಾವುಡರ ಪದ್ಯಕ್ಕೆ ನಾನು ಅಂಬೆಯಾಗಿ ನಿರ್ವಹಿಸಿದ್ದೆ,

***ಪ್ರಶ್ನೆ– ಇಂದಿನ ಯುವಕರನ್ನು ಸೆಳೆಯಲು ಯಕ್ಷಗಾನದಲ್ಲಿ ಯಾವ ರೀತಿ ಹೊಸತನ್ನು ನೀಡಲು ಸಾಧ್ಯವಿದೆ?***

ಇತ್ತೀಚಿಗೆ ಯಕ್ಷಗಾನವನ್ನು ಬೆಳಗಿನ ತನಕ ನೋಡುವವರು ಇಲ್ಲ, ಅದಕ್ಕೆ ವೈಯುಕ್ತಿಕ ತೊಂದರೆ ಕಾರಣ ಇರಬಹುದು ಇರುವ ಸಮಯಾವಧಿಯಲ್ಲಿ. ತುಂಬ ಜನ ಸೇರ್ತಾರೆ. ಹೊಸತನದ ಹೆಸರಿನಲ್ಲಿ ಯಕ್ಷಗಾನದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ವಾಣಿಜ್ಯೋದ್ಯಮದ ಉದ್ದೇಶದಲ್ಲಿ ಹೊರಟ ಮೇಳಗಳಲ್ಲಿ ಕಾಲ್ಪನಿಕ ಹೊಸ ಪ್ರಸಂಗ ಅನಿವಾರ್ಯ. ಕೆಲ ಮೇಳಗಳ ಕೆಲವು ಬಗೆಯ ನಿರ್ವಹಣೆಗಳು, ಸಹಜವಾಗಿಲ್ಲ ಎಂದೆನಿಸುತ್ತದೆ. ಇತ್ತೀಚಿಗೆ ಒಂದು ಪದ್ಯಕ್ಕೆ ೧೨ – ೧೫ ನಿಮಿಷ ಒಬ್ಬ ವೇಷಧಾರಿ ಅಭಿನಯಿಸ್ತಾರೆ. ಕೇವಲ ೫–೬ ನಿಮಿಷದಲ್ಲಿ ಸಂಭಾಷಣೆ ಮುಗಿದೇ ಹೋಗುತ್ತದೆ. ಜನರ ನಿರೀಕ್ಷೆಗೆ ಬೇಕಾದಂತಹಾ ವಿಶೇಷವಾದ ವಿಷಯವನ್ನು ಸಂದೇಶವನ್ನು ಕೊಡುವಲ್ಲಿ ಈಗಿನ ಪ್ರದರ್ಶನಗಳು ಎಲ್ಲೋ ಸೋಲುತ್ತಿವೆಯಾ ಎಂದೆನಿಸುತ್ತದೆ. ತಾಳಮದ್ದಳೆಯಲ್ಲಿ ಪೌರಾಣಿಕ ಪ್ರಸಂಗಗಳನ್ನು ಮಾಡುವುದರಿಂದ ನನ್ನ ಅನುಭವದ ಪ್ರಕಾರ ಎಷ್ಟೊಂದು ಅದ್ಭುತವಾದ ವಿಷಯಗಳು ಜನರ ಮನಸಿಗೆ ಹೋಗುತ್ತದೆ. ಜನ ೬ ತಾಸಾದ್ರೂ ವೀಕ್ಷಿಸ್ತಾರೆ. ಚಪ್ಪಾಳೆ ತಟ್ತಾರೆ. ಹಳೆತರಲ್ಲಿರುವ ಸವಿ ಹೊಸತರಲ್ಲಿ ಇಲ್ಲ ಎಂದೆನಿಸುತ್ತದೆ. ತಾಳಮದ್ದಳೆಗಂತೂ ಹೊಸ ಪ್ರಸಂಗಗಳು ಒಗ್ಗೋದೇ ಇಲ್ಲ. ಮೇಳಗಳಲ್ಲಿ ಹಣ ಗಳಿಕೆಗಾಗಿ ಹೊಸಹೊಸ ಪ್ರಯೋಗಗಳನ್ನು ಮಾಡ್ತಾರೆ. ಅದು ಯಜಮಾನರ ಕಲಾವಿದರ ಭವಿಷ್ಯದ ದುಡಿಮೆಯಿಂದ ತಪ್ಪಲ್ಲ. ಆದರೆ ಯಕ್ಷಗಾನಕ್ಕೆ ಪೌರಾಣಿಕ ತುಂಬ ಅಗತ್ಯ ಎಂದೆನಿಸುತ್ತದೆ.

***ಪ್ರಶ್ನೆ– ನಿಮ್ಮ ಮೇಲೆ ಪ್ರಭಾವ ಬೀರಿದವರು?***

ನನ್ನ ಮೇಲೆ ಪ್ರಭಾವ ಬೀರಿದವರು ಕಿಗ್ಗ ಯು. ಅನಂತಕೃಷ್ಣ ರಾವ್ ಅವರು. ಇವರು ತುಂಬ ಅಧ್ಯಯನಶೀಲರಾಗಿದ್ದು ತುಂಬ ವಿಷಯಗಳನ್ನು ತಿಳಿದುಕೊಂಡಿದ್ದರು. ತಾಳಮದ್ದಳೆಯಲ್ಲಿ ಸಂವಾದ, ಸಂಭಾಷಣೆ ಪ್ರಧಾನ. ಕೆಲವು ಪ್ರಬುದ್ಧ ಕಲಾವಿದರು ವಾದ ನಡೆಯುವಾಗ ವಿವಾದ ಆದ ಹಾಗೆ ಅದನ್ನ ಕೊಂಡುಹೋಗುವ ಪರಿಯನ್ನು ಕಂಡಾಗ ಅನಿಸ್ತಿತ್ತು ಸಾಕಷ್ಟು ಅಧ್ಯಯನ ಮಾಡಬೇಕು ಎಂದೆನಿಸುತ್ತಿತ್ತು, ಆ ಹಿನ್ನಲೆಯಲ್ಲಿ ಎಲ್ಲಾ ಪ್ರಬುದ್ಧ ಕಲಾವಿದರ ವಾಗ್ಝರಿ, ನಿರ್ವಹಣೆ, ನಿಭಾವಣೆ ಎಲ್ಲ ನಮ್ಮ ಮೇಲೆ ಪ್ರಭಾವ ಬೀರಿತು. ಅಭಿನಯಿಸುವಲ್ಲಿ ನನ್ನ ತಮ್ಮ ಅನಂತನೇ ಉಡುಪಿ ಕಲಾಕೇಂದ್ರದಲ್ಲಿ ಕಲಿತು ಬಂದಿದ್ದಾರೆ. ೪೦ ವರ್ಷಗಳಿಂದ ನಮ್ಮ ಸಂಘದಲ್ಲಿರುವ ಶ್ರೀಕಂಠ ಭಟ್ ಅಶ್ವಥ್ ನಾರಾಯಣ್ ಸುರೇಶ್ ಇವರೆಲ್ಲಾ ಕಲಾಕೇಂದ್ರದಲ್ಲೇ ನೃತ್ಯಾಭ್ಯಾಸ ಮಾಡಿ ಬಂದವರು. ವೆಂಕಟೇಶ ಯಕ್ಷಗಾನ ಕಲಾಸಂಘದಲ್ಲಿ ಜುಲೈ ಆಗಸ್ಟ್ ಸೆಪ್ಟೆಂಬರ್ ಮೂರು ತಿಂಗಳಲ್ಲಿ ಶನಿವಾರ ಮಧ್ಯಾಹ್ನ ಹಾಗೂ ಭಾನುವಾರ ಇಡೀ ದಿನ ಆಸಕ್ತ ವಿದ್ಯಾರ್ಥಿಗಳಿಗೆ ಯಕ್ಷಗಾನ ನೃತ್ಯ ತರಬೇತಿ ಮಾಡುತ್ತಿದ್ದೇವೆ. ಪ್ರಸಿದ್ಧ ಚೆಂಡೆ ಮದ್ದಳೆಗಾರರಾದ ದಿವಂಗತ ಕಳಸ ರಮೇಶ್ ಭಟ್ ಅವರ ನೆನಪಿನಲ್ಲಿ ಪ್ರತಿ ವರ್ಷ ತಾಳಮದ್ದಳೆ, ಸನ್ಮಾನ ಮಾಡುತ್ತೇವೆ. ನನ್ನ ತಾಯಿ ತಂದೆ ಅಣ್ಣ ತಮ್ಮ ಹೆಂಡತಿ ಮಗ, ಮಗಳು ಎಲ್ಲರ ಬೆಂಬಲ ಪ್ರೋತ್ಸಾಹವಿದೆ.

***ಪ್ರಶ್ನೆ– ಪಾತ್ರಕ್ಕೆ ಬೇಕಾದ ತಯಾರಿ ಯಾವ ರೀತಿ ಮಾಡಿಕೊಳ್ಳುತ್ತೀರಿ?***

ರಾಮಾಯಣ ಮಹಾಭಾರತ ಭಾಗವತಾದಿ ಕೃತಿಗಳ ಹಾಗೂ ಪ್ರಸಿದ್ಧ ಕಲಾವಿದರ ಪುಸ್ತಕಗಳನ್ನು ಅಧ್ಯಯನ, ಅದರಲ್ಲಿ ಸಿಗುವಂತಹಾ ವಿಚಾರಗಳನ್ನು ಬರೆದಿಟ್ಟುಕೊಳ್ಳುವುದು. ಪ್ರವಚನಗಳನ್ನು ಕೇಳುವುದು ಈ ಮೂಲಕ ನಾನು ಪಾತ್ರಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳುತ್ತೇನೆ

***ಪ್ರಶ್ನೆ– ಯುವ ಕಲಾವಿದರು ಅರ್ಥಗಾರಿಕೆಯ ಕೌಶಲ್ಯವನ್ನು ಬೆಳೆಸಿಕೊಳ್ಳುವ ಬಗ್ಗೆ?***

ಶೇಣಿ ಗೋಪಾಲ ಕೃಷ್ಣ, ರಾಮದಾಸ ಸಾಮಗ, ಮೊದಲಾದ ದಿಗ್ಗಜ ಕಲಾವಿದರು ನಿರ್ವಹಿಸಿದ ಪಾತ್ರಗಳ ಧ್ವನಿಮುದ್ರಿಕೆಯನ್ನು ಕೇಳುವುದರ ಮುಖಾಂತರ, ಅಧ್ಯಯನದ ಮುಖಾಂತರ ಅರ್ಥಗಾರಿಕೆಯ ಕೌಶಲ್ಯವನ್ನು ಕಲಾವಿದರು ಬೆಳೆಸಿಕೊಳ್ಳಬಹುದು. ಸಂಭಾಷಣೆಗೆ ಒಳ್ಳೆಯ ಭಾಷೆ ಬೇಕು. ಯಕ್ಷಗಾನದಲ್ಲಿ ಸಂಸ್ಕೃತ ಕನ್ನಡದ ಶಬ್ಧಗಳನ್ನೇ ಬಳಸಿದರೆ ಒಳ್ಳೆಯದು. ಯಕ್ಷಗಾನಕ್ಕೆ ಅನ್ಯದೇಶೀಯ ಭಾಷೆ ಒಗ್ಗುವುದಿಲ್ಲ. ಒಳ್ಳೆಯ ಮಾತುಗಾರಿಕೆ ನಿರರ್ಗಳವಾಗಿ ಅಸ್ಖಲಿತವಾಗಿ ಮಾತನಾಡುವ ಕಲೆ ಬೆಳೆಸಿಕೊಳ್ಳಬೇಕಾದರೆ, ನಿರಂತರ ಅಧ್ಯಯನಶೀಲತೆ, ಪ್ರತ್ಯುತ್ತರ ಕೊಡುವಾಗ ಆ ಕ್ಷಣದಲ್ಲಿ ಮಾನಸಿಕವಾಗಿ ಸಿದ್ಧನಾಗುವುದು, ಉತ್ತರ ಕೊಡುವ ತಾಕತ್ತು ಬೇಕೆಂದ್ರೆ ಅಧ್ಯಯನ ಶೀಲತೆ ಬೇಕು. ಪೌರಾಣಿಕ ವಿಷಯಗಳನ್ನು ಅರಿತಿರಬೇಕು. ಹಳೆಯ ಕಲಾವಿದರಿಂದ ಅರ್ಥ ವಿವರಗಳನ್ನು ತಿಳಿದುಕೊಳ್ಳುವುದು ಒಳ್ಳೆಯದು.

## ಯಕ್ಷ ಸಂಪನ್ಮೂಲ

**ಸಂಸ್ಥೆಯ ಹೆಸರು – ಮೊಗವೀರ ವ್ಯವಸ್ಥಾಪನಾ ಮಂಡಳಿ ಮುಂಬೈ**




**ಸ್ಥಾಪನೆ – ಆಗಸ್ಟ್ 09 1902**

ಕೇಂದ್ರ ಕಛೇರಿ – ಎಂವಿಎಂ ಶೈಕ್ಷಣಿಕ ಸಂಕೀರ್ಣ ಮಾರ್ಗ ಅಂಧೇರಿ (ಪ.)

ಪ್ರಥಮ ಅಧ್ಯಕ್ಷರು – ಸಾಹುಕಾರ ಸುರತ್ಕಲ್ ತಿಮ್ಮಪ್ಪ ದೇವುಜಿ

ಮಂಡಳಿ ಕಟ್ಟಿದ ಪ್ರಮುಖರು – ವಿದ್ವಾಂಸ ಬೋಳೂರು ಭಜನೆ ತ್ಯಾಂಪ, ಒಳಲಚ್ಚಿಲು ಲಿಂಗಪ್ಪ, ಕಣ್ಣಂಗಾರ್ ಪೋಂಕ್ರ, ಎರ್ಮಾಳ್ ಗುರುವಣ್ಣ

ಮುಖ್ಯಸ್ಥರು – ಶ್ರೀ ಅಶೋಕ್ ಸುವರ್ಣ

**ಪ್ರಶಸ್ತಿ – ಕರ್ನಾಟಕ ರಾಜ್ಯ ಪ್ರಶಸ್ತಿ 2012**

**ದಾಖಲೆಗಳು/ ಪ್ರಮುಖ ಕಾರ್ಯಕ್ರಮಗಳು:**

1904 ರಲ್ಲೇ ವಿದ್ಯಾರ್ಥಿಗಳಿಗೆ ಸಹಾಯ ಧನ ಹಾಗೂ ವಿದ್ಯಾರ್ಥಿ ವೇತನ ಸೌಲಭ್ಯ ಇಂದಿಗೂ ಮುಂದುವರಿಕೆ



ಮುಂಬೈ ಮೊಗವೀರ ವ್ಯವಸ್ಥಾಪನಾ ಮಂಡಳಿಯ ಸುಸಜ್ಜಿತ ಕಟ್ಟಡ

1908ರಲ್ಲಿ ಮುಂಬೈನಲ್ಲಿ ವಲಸೆ ಬಂದ ಮಕ್ಕಳಿಗೆ, ಕಾರ್ಮಿಕರ ಮಕ್ಕಳಿಗೆ ಶಿಕ್ಷಣದ ಅವಕಾಶ ನೀಡಲು ರಾತ್ರಿ ಶಾಲೆಯ ಪ್ರಾರಂಭ

1922 ರಲ್ಲಿ ವಿದ್ಯಾರ್ಥಿಗಳಿಗೆ ಪುಸ್ತಕ ಭಂಡಾರ ಹಾಗೂ ವಾಚನಾಲಯದ ಸ್ಥಾಪನೆ

1939 ರಲ್ಲಿ ಮೊಗವೀರ ಕನ್ನಡ ಮಾಸಿಕ ಪತ್ರಿಕೆಯ ಪ್ರಾರಂಭ

ಸಾಹಿತಿಗಳ ಬೆಳವಣಿಗೆ, ಸಾಹಿತ್ಯಿಕ ಸೇವೆ, ಸಾಮಾಜಿಕ ಭದ್ರತೆ ಶೈಕ್ಷಣಿಕ ವಿಚಾರ ಔದ್ಯೋಗಿಕ, ಮಾರ್ಗದರ್ಶನ, ಕೌಟುಂಬಿಕ ಸ್ಥಿರತೆಗೆ ಸಹಕಾರಿಯಾದ ಮುಂಬೈನ ಪ್ರಥಮ ಕನ್ನಡ ಮಾಸಿಕ ಹಾಗೂ ೮೨ ವರ್ಷಗಳ ಸಾರ್ಥಕ ಪ್ರಕಟಣೆಯ ಪತ್ರಿಕೆ ಎಂಬ ಹೆಗ್ಗಳಿಕೆ ಪಾತ್ರ

1970 ರಲ್ಲಿ ಸ್ವಾಮಿ ಮುಕ್ತಾನಂದ ಹಗಲು ಇಂಗ್ಲಿಷ್ ಶಾಲೆ ಸ್ಥಾಪನೆ. ಸದ್ಯ ಇಂಟರ್ ನೇಷನಲ್ ಸ್ಕೂಲ್, ಜೂನಿಯರ್ ಕಾಲೇಜು ಬಿಎಂ ಎಸ್ ಬಿಎಸ್ ಐಟಿ ಬಿಎಫ್ ಬಿಕಾಂ ಎಂಕಾಂ ಶಿಕ್ಷಣ ಸೌಲಭ್ಯ.

2017ರಲ್ಲಿ ಪ್ರತಿಷ್ಠಿತ ಬ್ರಿಡ್ ಸ್ಪೋರ್ಟ್ಸ್ ಅಕಾಡೆಮಿಯ ಸಹಯೋಗದೊಂದಿಗೆ ಕ್ರೀಡಾ ತರಬೇತಿ ಕೇಂದ್ರದ ಸ್ಥಾಪನೆ

ಮುಂಬೈನ ಹಲವು ನಗರಗಳಲ್ಲಿ ಮಂಡಳಿವೆ ಹಲವು ಶಾಖೆಗಳ ರಚನೆ, ಸುರತ್ಕಲ್, ದಕ ಉಡುಪಿ ಜಿಲ್ಲೆಗಳಲ್ಲೂ ತನ್ನ ಶಾಖೆಯನ್ನು ತೆರೆದಿದೆ.

1918ರಲ್ಲಿ ಪ್ಲೇಗ್ ಸಂಕಷ್ಟದ ಪರಿಸ್ಥಿತಿಯಲ್ಲಿ ಮುಂಬೈ ಜನತೆಯ ನೆರವಿಗೆ ಧಾವಿಸಿದ ಏಕೈಕ ಸಮಾಜ ಸೇವಾ ಸಂಸ್ಥೆ

2020 ಕೊರೋನಾ ಬಿಕ್ಕಟ್ಟಿನ ಸಂದರ್ಭದಲ್ಲೂ ಆಹಾರ ಸಾಮಗ್ರಿ ವಿತರಣೆ, ಇನ್ನಿತರ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡೆ.

1930 ರಲ್ಲಿ ಮಹಿಳೆಯರಿಗಾಗಿ ಶಾಲೆಯ ಸ್ಥಾಪನೆ:: 1941 ರಲ್ಲಿ ಹುಡುಗರಿಗಾಗಿ ಪ್ರತ್ಯೇಕ ಹಗಲು ಕನ್ನಡ ಶಾಲೆ ಸ್ಥಾಪನೆ

ಇತರ ಸಂಘಟನೆಗಳು ವಿಲೀನಗೊಂಡಿರುವುದು – ೧೯೨೧ರಲ್ಲಿ ಮೊಗವೀರ ಕ್ಲಾರ್ಕ್ಸ್ ಯೂನಿಯನ್ ವಿಲೀನ

1940 ರಲ್ಲಿ ಮೊಗವೀರ ಧರ್ಮೋದ್ಧಾರ ಮಂಡಳಿ ವಿಲೀನ :: 1941ರಲ್ಲಿ ಮೊಗವೀರ ವಾಗ್ವರ್ಧಿನೀ ಸಭಾ ವಿಲೀನ

1942 ರಲ್ಲಿ ಕನ್ನಡ ಗ್ರಂಥಾಲಯ ವಿಲೀನ

1945 ರಲ್ಲಿ ಮೊಗವೀರ ಗಾರ್ಡ್ಸ್ 1946ರಲ್ಲಿ ಮೊಗವೀರ ಬ್ಯಾಂಕ್ 1963 ರಲ್ಲಿ ಮಹಾಲಕ್ಷ್ಮೀ ಹೌಸಿಂಗ್ ಸೊಸೈಟಿ, ಮಹಾಲಕ್ಷ್ಮಿ ಪ್ರೆಸ್, ಮಂಗಳೂರಿನಲ್ಲಿ 1963 ರಲ್ಲಿ ಮಹಾಲಕ್ಷ್ಮಿ ಸಭಾಭವನ ಮತ್ತು ಕಸೂತಿ ಕೇಂದ್ರ ಮೊದಲಾದ ಅಂಗಸಂಸ್ಥೆಗಳ ಉದಯ

ಪ್ರಸ್ತುತ ಮುಂಬೈನಲ್ಲಿ ಮಂಡಳಿಯ ನಾಲ್ಕು ಶಾಖೆಗಳು ಕಾರ್ಯ ನಿರ್ವಹಿಸುತ್ತಿವೆ

ಸದ್ಯ ಜನೋಪಯೋಗಿ ಕಾರ್ಯದಲ್ಲಿ ನಿರತವಾಗಿರುವ ಅಂಗಸಂಸ್ಥೆಗಳು – ಎಂವಿಎಂ ಇಂಟರ್ ನೇಷನಲ್ ಸ್ಕೂಲ್ಸ್, ಅಡ್ವೋಕೇಟ್ ಎನ್ ದಿನಕರ್ ರಾವ್ ಮತ್ತು ಶ್ರೀಮತಿ ಧನವಂತಿ ರಾವ್ ನರ್ಸರಿ, ಬೋಳೂರು ಶ್ರೀಮತಿ ಮನೋರಮಾ ಜಿ ಸುವರ್ಣ ಪೂರ್ವ ಪ್ರಾಥಮಿಕ ಶಾಲೆ, ಬೆಂಗರೆ ಗಂಗಾಧರ ಪಿ. ಸುವರ್ಣ ಪ್ರಾಥಮಿಕ ಶಾಲೆ ಸ್ವಾಮಿ ಮುಕ್ತಾನಂದ ಪ್ರೌಢಶಾಲೆ, ಸಸಿಹಿತ್ಲು ಭವಾನಿ ಮೆಂಡನ್ ಮತ್ತು ಮೋಹನ್ ಮೆಂಡನ್ ವಾಣಿಜ್ಯ ಕಿರಿಯ ಮಹಾವಿದ್ಯಾಲಯ, ಜರ್ಕಲಾ ಸುಧಾಕರ ಹೆಗ್ಡೆ ಕಾಲೇಜ್ ಆಫ್ ಮೇನೇಜ್ ಮೆಂಟ್ ಸ್ಟಡೀಸ್, ಮೊಗವೀರ ಬ್ಯಾಂಕ್ ಕಾಲೇಜ್ ಆಫ್ ಸೈನ್ಸ್, ಎಂವಿಎಂ ಕಾಲೇಜು, ಅಕೌಂಟಿಂಗ್ ಆಂಡ್ ಫೈನಾನ್ಸ್ ಎಂವಿಎಂ ವಾಣಿಜ್ಯ ಮಹಾವಿದ್ಯಾಲಯ

ಹಾಗೂ ಎಂವಿಎಂ ಶ್ರೀಮತಿ ಶಾಲಿನಿ ಜಿ ಶಂಕರ್ ಸಭಾಗೃಹ

**ಯಕ್ಷಗಾನ ಹಾಗೂ ಕಲಾ ಕ್ಷೇತ್ರದ ಸೇವೆಗಳು** – ಮುಂಬೈನಲ್ಲಿ ಹೊರನಾಡು ಕನ್ನಡಿಗರ ಸಮಾವೇಶ, ಸಾಹಿತ್ಯ ಸಮ್ಮೇಳನ ಮೊದಲಾದ ಕಾರ್ಯಕ್ರಮಗಳನ್ನು ಆಯೋಜಿಸಿದ್ದಾರೆ. ಕಳೆದ 80 ವರ್ಷಗಳಿಂದ ಪ್ರತೀ ವರ್ಷವೂ ಮುಂಬೈನಲ್ಲಿ ನಡೆಯುವ ನಾಟಕ ತಂಡಗಳಿಗೆ ಪ್ರದರ್ಶನದ ಅವಕಾಶ ಧನ ಪ್ರೋತ್ಸಾಹ ನೀಡಿದ್ದಾರೆ. ಯಕ್ಷಗಾನ ಕಲಾವಿದರಾದ ಕೆರೆಮನೆ ಶಿವಾನಂದ ಹೆಗಡೆ, ಕೋಳ್ಯೂರು ರಾಮಚಂದ್ರ ರಾವ್ ಸೇರಿದಂತೆ ೩೦ಕ್ಕೂ ಹೆಚ್ಚು ಕಲಾವಿದರನ್ನು ಸನ್ಮಾನಿಸಿದ್ದಾರೆ. ಈ ಮಂಡಳಿಯ ಆಶ್ರಯದಲ್ಲಿ ಬಪ್ಪನಾಡು ಮೇಳ, ಸಸಿಹಿತ್ಲು ಭಗವತಿ ಮೇಳ, ಮುಲ್ಕಿ ಮೇಳ, ಸಾಲಿಗ್ರಾಮ ಮೇಳ, ಅಮೃತೇಶ್ವರಿ ಮೇಳಗಳು ಮುಂಬೈನಲ್ಲಿ ಯಕ್ಷಗಾನ ಪ್ರದರ್ಶನಗಳನ್ನು ನೀಡಿವೆ.

## ನಮ್ಮ ಲೈಬ್ರರಿ – ಯಕ್ಷಗಾನ ಪ್ರಸಂಗಗಳಲ್ಲಿ ಕರ್ಣ



ಮಹಾಭಾರತದ ದುರಂತ ನಾಯಕ ಕರ್ಣನ ಕುರಿತಾದ ಯಕ್ಷಗಾನ ಪ್ರಸಂಗಗಳ ಪರಿಚಯ ನೀಡುವ ಉದ್ದೇಶದ ಲೇಖನ ಇದಾಗಿದೆ. ಹಲ;ವು ತಾಳಮದ್ದಳೆಗಳಲ್ಲಿ ಪ್ರದರ್ಶನಗಳಲ್ಲಿ ಯಕ್ಷಗಾನದ ವಿದ್ವಾಂಸರು ಕರ್ಣನ ಪಾತ್ರದ ವ್ಯಾಖ್ಯಾನವನ್ನು ವಿವಿಧ ರೀತಿಯಲಲಿ ಮಾಡಿ ಯಕ್ಷ ರಸಿಕರನ್ನು ರಂಜಿಸಿದ್ದಾರೆ. ಕರ್ಣನ ಕುರಿತಾದ ಯಕ್ಷಗಾನ ಪ್ರಸಂಗ ಕೋಶವನ್ನು ಅವಲೋಕಿಸಿದಾಗ ನಮಗೆ ಸಿಗುವ ಪ್ರಮುಖ ಪ್ರಸಂಗಗಳು ಗೇರುಸೊಪ್ಪೆ ಶಾಂತಪ್ಪಯ್ಯ ತೆಂಕುತಿಟ್ಟಿನಲ್ಲಿ ರಚಿಸಿದ ಪ್ರದರ್ಶಿಸಲ್ಪಡುವ ಕರ್ಣ ಪರ್ವ, ಪಾಂಡೇಶ್ವರ ವೆಂಕಟ ಕವಿ ಬರೆದ ಬಡಗುತಿಟ್ಟಿನ ಕರ್ಣಾರ್ಜುನ ಕಾಳಗ ಬಹಳ ಪ್ರಸಿದ್ಧಿ ಪಡೆದ ಹೆಚ್ಚಾಗಿ ಪ್ರದರ್ಶನಗೊಳ್ಳುತಿರುವ ಪ್ರಸಂಗಗಳು. ಇನ್ನೊಬ್ಬರ ಹಿರಿಯ ಕವಿ ಕಿರಿಕ್ಕಾಡು ವಿಷ್ಣು ಭಟ್ಟರವರು ರಚಿಸಿದ ಕರ್ಣಾವಸಾನ ಪ್ರಸಂಗ ಸೀತಾನದಿ ಗಣಪಯ್ಯ ಶೆಟ್ಟರು ಬರೆದ ಕರ್ಣ ಪಟ್ಟಾಭಿಷೇಕ ಪ್ರಸಂಗ ನೀ ನಾರಾಯಣ ಮಧ್ಯಸ್ಥರು ಬರೆದ ಕರ್ಣ ಚರಿತ್ರೆ ಬಿ ಬಾಬು ಕುಡ್ತಡ್ಕ ಅವರ ಅರ್ಥವನ್ನೊಳಗೊಂಡ ಕರ್ಣ ಕ್ಷಮಯಾಚನ ಗೋಕರ್ಣದ ಮಹಾಬಲೇಶ್ವರ ಬರವಣಿ ಬರೆದ ಕರ್ಣ ರತ್ನಾವತಿ ವಿ ಮಂಜಪ್ಪ ಪಟೇಲ ಅಮಾಚಿ ಸಾಗರ ಇವರು ಪ್ರಕಟಿಸಿರುವ ಕರ್ಣ ದಿಗ್ವಿಜಯ ಮತ್ತು ಕಬ್ಬಿನಾಲೆ ವಂತ ಭಾರಧ್ವಾಜ ರು ಇತ್ತಿಚಿಗೆ ಪ್ರಕಟಿಸಿರುವ ವೃಷಾಲಿ ವಿವಾಹ ಯಕ್ಷಗಾನ ಪ್ರಸಂಗ ಇವು ಕರ್ಣನ ಜೀವನ ಕುರಿತಾದ ಪ್ರಮುಖ ಸಾಹಿತ್ಯ ಪ್ರಸಂಗ ಕೃತಿಗಳು. ಧರ್ಮಸ್ಥಳ ತಾಂಡವಾಲೆ ಸಂಗ್ರಹದಲ್ಲಿ ಪರಮೇಶ್ವರ ಪುಣಿಚಿತ್ತಾಯ ಬರೆದ ಕಣಾರ್ಜುನ ಕಾಳಗ ಮತ್ತೊಂದು ಪ್ರಾಚೀನ ಪ್ರಸಂಗ ಇದೆ. ಇದು ಈವರೆಗೆ ಪ್ರಕಟವಾದಂತಿಲ್ಲ. ಇನ್ನು ಎಂ ಕೆ ರಮೇಶ ಆಚಾರ್ಯ ಬರೆದ ಕರ್ಣ ವೃಷಾಲಿ ಡಾ. ಗಜಾನನ ಹೆಗಡೆ ಬರೆದ ಕರ್ಣ ಜನ್ಮ ಜಾತಕಂ ಅನಂತರಾಮ್ ಬಂಗಾಡಿ ವಿರಚಿತ ಕರ್ಣನ ಅಂತ್ಯ ಕಬ್ಬಿನಾಲೆಯವರ ಕರ್ಣ ರಸಾಯನ, ನಾರಾಯಣ ಸುಬ್ಬಾಭಟ್ ವಿರಚಿತ ಕರ್ಣ ವಿಜಯ ನಾರಾಯಣ ಉಪಾಧ್ಯಾಯ ಬೀಜಾಡಿ ಮತ್ತು ಮಧುಕುಮಾರ್ ಬೋಳುರು ವಿರಚಿತ ಕರ್ಣಾರ್ಜುನ, ಸುಬ್ರಾಯ ಕವಿಯ ಕರ್ಣಾವಸಾನ ಹೀಗೆ ಬಹಳಷ್ಟು ಪ್ರಸಂಗ ಕೃತಿಗಳು ಕರ್ಣನ ವ್ಯಕ್ತಿತ್ವವನ್ನು ಚಿತ್ರಿಸಿರುವುದು ಕಂಡು ಬರುತ್ತದೆ.

ಕ್ರಿಶ. ೧೬೦೦ ಕ್ಕೂ ಮೊದಲು ಪಾಂಡೇಶ್ವರ ವೆಂಕಟ ಕವಿ ಬರೆದ ಬಡಗುತಿಟ್ಟಿನ ಕರ್ಣಾರ್ಜುನ ಕಾಳಗ ಯಕ್ಷಗಾನದ ಮೊದಲ ಕರ್ಣನ ಕರಿತ ಪ್ರಸಂಗ ಪುಸ್ತಕ. ಸುಮಾರು ೫೯೦ ಪದ್ಯಗಳಿಂದ ಕೂಡಿದ  ಶಲ್ಯ ಸಾರಥ್ಯ ಶಿಬಿರ ಪ್ರಕರಣ, ದುಶ್ಯಾಸನ ವಧೆ, ಕರ್ಣಾವಸಾನ ಹೀಗೆ ನಾಲ್ಕು ಘಟ್ಟಗಳನ್ನು ಹೊಂದಿದ ತಾಳಮದ್ದಳೆ ಮತ್ತು ಆಟಗಳಲ್ಲಿ ಮಾತು ರಂಗ ವಿಧಾನಗಳಿಗೆ ಅವಕಾಶವಿರುವ ಕರ್ಣನ ವ್ಯಕ್ತಿತ್ವದಿಂದ ಜನಜನಿತ ಕಥಾನಕವುಳ್ಳ ಸುಂದರ ಆಖ್ಯಾನ. ಈ ಪ್ರಸಂಗ ಪುಸ್ತಕವನ್ನು ಉಡುಪಿಯ ಶ್ರೀ ಮನ್ಮಧ್ವ ಸಿದ್ದಾಂತ ಗ್ರಂಥಾಲಯ ದವರು ಹನ್ನೊಂದಕ್ಕೂ ಹೆಚ್ಚು ಬಾರಿ ಮುದ್ರಿಸಿ ಪ್ರಕಟಿಸಿದ್ದರೆಂದರೆ ಇದರ ಜನಪ್ರಿಯತೆ ಯಾವ ರೀತಿಯಾಗಿತ್ತು ಎಂದು ತಿಳಿದು ಬರುತ್ತದೆ. ಬ್ರಹ್ಮಾವರ ಹರಿಕೃಷ್ಣ ಹೊಳ್ಳರು ರಂಗ ಪ್ರಯೋಗಕ್ಕಾಗಿ ಈ ಕೃತಿಯ ಸಂಕ್ಷಿಪ್ತ ಆವೃತ್ತಿ ಪ್ರಕಟಿಸಿದ್ದರೆ ದಿನೇಶ ಉಪ್ಪೂರರು ಅರ್ಥ ಸಹಿತ ಪುಸ್ತಕ ಬರೆದಿದ್ದಾರೆ. ಕರ್ನಾಟಕ ಸಂಸ್ಕೃತಿ ಇಲಾಖೆ ಜಾನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟದಲ್ಲಿ ಕೂಡಾ ಪಾಂಡೇಶ್ವರ ವೆಂಕಟ ಕವಿಯ ಕರ್ಣಾರ್ಜುನ ಪ್ರಸಂಗವನ್ನು ನೋಡಬಹುದು.

ಮಂಗಳೂರಿನಲ್ಲಿ ನ್ಯಾಯಾಧೀಶ ಹುದ್ದೆಯಲ್ಲಿದ್ದ(ಕಾಲ ೧೮೪೦–೧೮೭೦) ಗೇರುಸೊಪ್ಪೆ ಶಾಂತಪ್ಪಯ್ಯ ವಿರಚಿತ ಕರ್ಣಪರ್ವ ಯಕ್ಷಗಾನ ಪ್ರಸಂಗ ತೆಂಕುತಿಟ್ಟಿನ ತಾಳಮದ್ದಳೆ ಮತ್ತು ಪ್ರದರ್ಶನಗಳೆರಡರಲ್ಲೂ ಬಳಸುವ ಸುಂದರ ಕೃತಿ. ನೀರ್ಚಾಲು ನಾರಾಯಣ ಮಧ್ಯಸ್ಥರು ರಚಿಸಿ ಸಾಗರ ಸಿರಿವಂತೆಯ ತ್ರಿಪುರಾಂತಕ ಯಕ್ಷಗಾನ ಸಂಘದವರು ೧೯೭೮ ರಲ್ಲಿ ಪ್ರಕಟಿಸಿದ ಕರ್ಣ ಚರಿತೆ ಪ್ರಸಂಗ ೬೩೧ ಪದ್ಯಗಳಿಂದ ಕೂಡಿದ್ದು ಕರ್ಣನ ಜೀವನವನ್ನು ಕರ್ಣಜನ್ಮ, ಕುಂತಿ ಪರಿಣಯ, ಕರ್ಣ ಧನುರ್ವೇದ, ಅಂಗಾಭಿಷೇಕ, ಕರ್ಣ ವಿವಾಹ, ಕರ್ಣ ಬೇಧನ, ರಾತ್ರಿ ಯುದ್ಧ,  ಕರ್ಣ ನಿರ್ಯಾಣ, ಹೀಗೆ ೮ ವಿಭಾಗದ ಕಥನಗಳಿಂದ ಕೂಡಿದ ಪ್ರಸಂಗ. ಉತ್ತರ ಕನ್ನಡದ ಯಕ್ಷಗಾನ ಕಲಾವಿದ ಎಂ ಜಿ ಬರವರ್ಣಿ ಗೋಕರ್ಣ ಇವರು ತಮ್ಮ ೨೯ ನೇ ಕೃತಿ ಕುಸುಮವಾಗಿ ಕರ್ಣ ರತ್ನಾವತಿ ಎನ್ನುವ ಪ್ರಸಂಗ ಬರೆದಿದ್ದು ೧೯೯೯ ರಲ್ಲಿ ಪ್ರಕಟವಾಗಿದೆ.. ಇದು ಕರ್ಣ ವಿವಾಹ ಕುರಿತ ಪ್ರಸಂಗ. ತೆಂಕು ತಿಟ್ಟಿನ ಯಕ್ಷಗಾನ ಕಲಾವಿದ ಬಾಬು ಕುಡ್ತಡ್ಕ ಕರ್ಣ ಕ್ಷಮಾಯಾಚನಾ ಅಥವಾ ದ್ರೋಣ ಸೇನಾಧಿಪತ್ಯ  ಎನ್ನುವ ಅರ್ಥ ಸಹಿತ ಪುಸ್ತಕ ಇನ್ನೊಂದು ಪ್ರಕಟಿತ ಯಕ್ಷಗಾನ ಕೃತಿ.

ಕರ್ಣನ ಜೀವನದ ಪ್ರಮುಖ ಘಟ್ಟವಾದ ಹಸ್ತಿನಾಪುರದ ದೊರೆ ದುರ್ಯೋಧನನ ಸ್ನೇಹ ಹಾಗೂ ಆತ ಕರ್ಣನನ್ನು ಅಂಗ ದೇಶದ ರಾಜನನ್ನಾಗಿ ಮಾಡುವ ಸುಂದರ ಕಥಾನಕವುಳ್ಳ ಕರ್ಣ ಪಟ್ಟಾಭಿಷೇಕ ಪ್ರಸಂಗವನ್ನು ಪ್ರಖ್ಯಾತ ಕವಿ ಸೀತಾನದಿ ಗಣಪಯ್ಯ ಶೆಟ್ಟಿ ಇವರು ಬರೆದಿದ್ದು ಸುಬೋಧ ಸಾಹಿತ್ಯ ಭಂಡಾರ ಹಿರಿಯಡಕ, ಉಡುಪಿ ಇವರು ೧೯೮೨ ರಲ್ಲಿ ಪ್ರಕಟಿಸಿದ್ದಾರೆ. ಇದೇ ಕೃತಿ ಕನ್ನಡ ಸಂಸ್ಕೃತಿ ಇಲಾಖೆಯವರ ಯಕ್ಷಗಾನ ಸಂಪುಟದಲ್ಲಿ ಕೂಡಾ ಕಾಣ ಸಿಗುತ್ತದೆ. ಕರ್ಣ ದಿಗ್ವಿಜಯ ಅಥವ ವೈಷ್ಣವಾಧ್ವರ ಎನ್ನುವ ಯಕ್ಷಗಾನ ಪ್ರಸಂಗ ಪುಸ್ತಕವನ್ನು ವಿ ಮಂಜಪ್ಪ ಪಟೇಲ್ ಅಮಾಚಿ ಸಾಗರ ಇವರು ೧೯೮೨ ರಲ್ಲಿ ಪ್ರಕಟವಾಗಿದ್ದು ಇನ್ನೊಂದು ವಿಭಿನ್ನ ಪ್ರಸಂಗ ಪುಸ್ತಕವಾಗಿದೆ.

ಡಾ. ಕಬ್ಬಿನಾಲೆ ವಸಂತ ಭಾರಧ್ವಾಜರು ೨೦೨೧ರಲ್ಲಿ ಪ್ರಕಟಿಸಿದ ವಸಂತ ಶೋಡಷಿ ಎನ್ನುವ ಹದಿನಾರು ಯಕ್ಷಗಾನ ಕಾವ್ಯ ಕೃತಿಯಲ್ಲಿ ನಾಲ್ಕನೇ ಯಕ್ಷಗಾನ ಪ್ರಸಂಗ ವೃಷಾಲೀ ವಿವಾಹ, ಇದು ಸುಂದರ ೭೨ ಪದ್ಯಗಳಿಂದ ಕೂಡಿದ ಕರ್ಣನಿಗೆ ಸಂಬಂಧಿಸಿದ ಇತ್ತೀಚಿನ ಉತ್ತಮ ಯಕ್ಷಗಾನ ಪ್ರಸಂಗ. ಇದೇ ಕಥೆಯನ್ನು ಹೊಂದಿದ ಕರ್ಣ ವೃಷಾಲಿ ಪ್ರಸಂಗ ಎಂ ಕೆ ರಮೇಶ್ ಆಚಾರ್ಯ ಇವರು ರಚಿಸಿದ್ದು ಯಶಸ್ವಿ ಪ್ರದರ್ಶನ ಕಾಣುತ್ತಿದೆ. **– ಲೇಖಕರು – ಉಮೇಶ್ ಶಿರೂರು**